ಸಂಪುಟ : 8 ಸಂಚಿಕೆ : 211 ಪುಟ : 4 ಬೆಲೆ : 3.00 ಬುಧವಾರ ಸೆಪ್ಟೆಂಬರ್ 27, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 211 Pages : 4 Price : 3.00 Wednesday September 27, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ಸೆಪ್ಟೆಂಬರ್ 27 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂಬರ್. 29 ರಲ್ಲಿ ರಾಜೀವ ಗಾಂಧಿ ನಗರ ಗುಂಪಿನ ಮನೆ ಲೈನ್, ಭಾಂಡಗೆ ಲೈನ್, ಡಂಬಳವರ್ ಲೈನ್, ವಾರ್ಡ್ ನಂಬರ್. 14 ರಲ್ಲಿ ಹಣಗಿ ಜಿನ್ ಅವರ್ ಲೈನ್ ಭಾಗ ಒಂದು ಎರಡು, ಟ್ಯಾಗೋರ್ ರೋಡ್ ಲೈನ್, ಕುರಡಗಿಯವರು ಲೈನ್, ಜನತಾ ಗುಡೌನ್ ಲೈನ್, ಕೊನ್ನುರ್ ಚಾಳ ಲೈನ್ ಮುಂಡರಗಿ ಲೈನ್, ವೆಂಕಟೇಶ್ ಟಾಕೀಸ್ ಲೈನ್, ಮಣಿಕಂಠ ಲೈನ್, ಕಟ್ಟಿಮನಿಯರ್ ಲೈನ್, ವಾರ್ಡ್ ನಂಬರ್. 13ರಲ್ಲಿ ಹಾದಿಮನಿಯರ್ ಲೈನ್, ಮಠದ ವಕೀಲರ ಲೈನ್, ಪೊಲೀಸ್ ಕ್ವಾಟರ್ಸ್ ಲೈನ್, ಶಾಂತಗಿರಿಯವರ ಲೈನ್, ಕೋನಿಯಾರ್ ಲೈನ್, ಪೂಜಾರಿ ಶೆಟ್ರವರ್ ಲೈನ್, ಕೆಸಿ ರಾಣಿ ರೋಡ್ ಹೆಡ್ ಪೋಸ್ಟ್ ಲೈನ್ ಪತ್ತೆಪುರದವರ ಬಿಲ್ಡಿಂಗ್, ಕಾರಂತ ಡಾಕ್ಟರ್ ಲೈನ್, ವಕೀಲ ಚಾಳ ಲೈನ್, ಗೋವ್ಸ್ ಬಿಲ್ಡಿಂಗ್ ಲೈನ್ ಉಳಿದ ಕೆಲವು ಭಾಗಗಳು. ವಾರ್ಡ್ ನಂ.16 ಡಿಸಿ ಮಿಲ್ ರಸ್ತೆ ಹೊಂಬಳ ನಾಕಾ, ವಾರ್ಡ್ ನಂ. 22 ರಲ್ಲಿ ಗಂಗಿಮಡಿ ಭಾಗ-1, 2, 3, 4, 5 ವಾರ್ಡ್ 5,6,7 ರಲ್ಲಿ ಫನಿಭಂದ್ ರವರ ಲೈನ್, ತಬ್ಬಿಯವರ ಲೈನ್, ಶಿವಾಜಿ ನಗರದ ಕೆಲವು ಭಾಗಗಳು, ಪಂಚಲಕ್ಷ್ಮಿ ಬಡಾವಣೆ ಕೆಲವು ಭಾಗಗಳು, ವಾರ್ಡ್ 19, 24, 25 ರಲ್ಲಿ ಖಾನ್ ತೋಟ ಭಾಗ-1, 2 ಬಾವಿ ಮೆಂಬರ್ ಲೈನ್, ಹಾವನೂರ್ ಲೈನ್, ಹಿಡಿಕಿಮಠ್ ಭಾಗ-1,2 ಕೋಡಿ ಅವರ ಲೈನ್, ಮುನ್ನಿ ಪ್ರೆಸ್ ಬಟ್ಟರ್ ಲೈನ್, ಗುಂಜಿ ಸರ್ ಲೈನ್, ಕಾಗದಗೇರಿ ಹೊಸ ಲೈನ್, ಹಳೇ ಲೈನ್, ಪಿಎಂಟಿ ರಸ್ತೆ, ಕೊನೇರಿ ಹೊಂಡ, ಮದ್ಲಿ ಓಣಿ ಲೈನ್. ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

**ಜಿಲ್ಲಾ ಮಟ್ಟದ ಹಿರಿಯ ನಾಗರಿಕರ ಕ್ರೀಡಾ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಡಿಸಿ ವೈಶಾಲಿ. ಎಂ.ಎಲ್**

# ಕ್ರೀಡೆಗೆ ವಯಸ್ಸಿನ ಮಿತಿ ಇಲ್ಲ





**■ವಿಜಯಸಾಕ್ಷಿ ಸುದ್ದಿ, ಗದಗ**

ಹಿರಿಯ ನಾಗರಿಕರು ತಮ್ಮ ದೈನಂದಿನ ಚಟುವಟಿಕೆಗಳೊಂದಿಗೆ, ಮನೆಯಲ್ಲಿ ಮಕ್ಕಳ ಜೊತೆಗೆ ಕ್ರೀಡೆಯಲ್ಲಿ ತೊಡಗಿಸಿಕೊಂಡು, ಉತ್ತಮ ಆರೋಗ್ಯವನ್ನು ಹೊಂದಿ ಸದೃಢರಾಗಿರಬೇಕು ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ನುಡಿದರು.

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಹಿರಿಯ ನಾಗರಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆ ಮತ್ತು ಸಂಘಗಳ ಸಹಯೋಗದಲ್ಲಿ ನಗರದ ಕೆ.ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ವಿಶ್ವ ಹಿರಿಯ ನಾಗರಿಕ ದಿನಾಚರಣೆ-2023ರ ಪ್ರಯುಕ್ತ ಜಿಲ್ಲಾ ಮಟ್ಟದ ಹಿರಿಯ ನಾಗರಿಕರ ಕ್ರೀಡಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಅವರು ಜಿಲ್ಲಾ ಮಟ್ಟದ ಹಿರಿಯ ನಾಗರಿಕರ ಕ್ರೀಡಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಹಿರಿಯ ನಾಗರಿಕರು ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದಾಗಿದೆ. ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಉತ್ಸಾಹದಿಂದ ಇಂತಹ ಕ್ರೀಡೆಗಳಲ್ಲಿ ಪಾಲ್ಗೊಳ್ಳಬೇಕು. ಹಿರಿಯ ನಾಗರಿಕರಿಗಾಗಿ ಸರ್ಕಾರದಿಂದ ಅನುಷ್ಠಾನಗೊಳಿಸಲಾದ ವಿವಿಧ ಯೋಜನೆಗಳ ಸೌಲಭ್ಯದ ಸದುಪಯೋಗವಾಗಬೇಕು ಎಂದು ತಿಳಿಸಿದರು.

> ಹಿರಿಯ ನಾಗರಿಕರು ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹೊಂದಬಹುದು. ಕ್ರೀಡಾ ಮನೋಭಾವನೆಯಿಂದ ಎಲ್ಲರನ್ನೂ ಹತ್ತಿರ ಮಾಡಿಕೊಳ್ಳಬಹುದು. ದೈಹಿಕ ಮತ್ತು ಮಾನಸಿಕ ಆರೋಗ್ಯ ಎರಡೂ ಕೂಡ ಹಿರಿಯರಿಗೆ ಮುಖ್ಯವಾಗಿದೆ. ಯುವ ಪೀಳಿಗೆ ಪುಸ್ತಕಗಳನ್ನು ಓದುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಸರ್ಕಾರದ ಸವಲತ್ತುಗಳನ್ನು ಎಲ್ಲರೂ ಸದುಪಯೋಗಪಡಿಸಿಕೊಳ್ಳಬೇಕು.
>
> **– ವೈಶಾಲಿ ಎಂ.ಎಲ್.**
> ಗದಗ ಜಿಲ್ಲಾಧಿಕಾರಿಗಳು.

▶▶3ನೇ ಪುಟಕ್ಕೆ

---

**'ಆಯುಷ್ಮಾನ್ ಭವ' ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಜಿ.ಎಸ್ ಪಾಟೀಲ**

# ಸರ್ಕಾರದಿಂದ ಮನೆ ಬಾಗಿಲಿಗೆ ಆರೋಗ್ಯ ಸೇವೆ



**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಜನರ ನಿರೀಕ್ಷೆಗೆ ಪೂರಕವಾಗಿ ಸೌಲಭ್ಯಗಳು ದೊರಕುತ್ತಿಲ್ಲ ಎಂಬ ಸಾರ್ವಜನಿಕ ವಲಯದಲ್ಲಿನ ದೂರಿಗೆ ಪರಿಹಾರ ಕಂಡುಕೊಳ್ಳಲು ಸರ್ಕಾರವು ಮನೆ ಬಾಗಿಲಿಗೆ ಆರೋಗ್ಯ ಸೇವೆಗಳನ್ನು ತಲುಪಿಸಲು ಮುಂದಾಗಿದೆ ಎಂದು ಶಾಸಕ ಜಿ.ಎಸ್ ಪಾಟೀಲ ಹೇಳಿದರು.

ಜಿಲ್ಲಾಡಳಿತ, ಜಿ.ಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರೋಣ ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯ ಮತ್ತು ಸಮುದಾಯ ಆರೋಗ್ಯ ಕೇಂದ್ರ ಗಜೇಂದ್ರಗಡ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ನಡೆದ 'ಆಯುಷ್ಮಾನ್ ಭವ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹ ಆರೋಗ್ಯ ಸೌಲಭ್ಯ ಒದಗಿಸುವುದು ಸರ್ಕಾರಗಳ ಉದ್ದೇಶವಾಗಿದೆ. ಗ್ರಾಮ, ತಾಲೂಕು ಮಟ್ಟದಲ್ಲಿ ನುರಿತ ವೈದ್ಯರ ಕೊರತೆಗೆ ಪರಿಹಾರ ಕಲ್ಪಿಸುವುದರೊಂದಿಗೆ ಎಲ್ಲ ಆರೋಗ್ಯ ಸೇವೆಗಳನ್ನು ಉಚಿತವಾಗಿ ರೋಗಿಗಳಿಗೆ ತಲುಪಿಸುವ ಉದ್ದೇಶವೇ 'ಆಯುಷ್ಮಾನ್ ಭವ' ಆಗಿದೆ ಎಂದರು.

ಡಿಎಚ್ಒ ಡಾ. ಎಸ್.ಎಸ್ ನೀಲಗುಂದ ಮಾತನಾಡಿ, ಪಟ್ಟಣದ ಸಮುದಾಯ ಆಸ್ಪತ್ರೆಯು ತಾಲೂಕಾ ಮಟ್ಟದ ಆಸ್ಪತ್ರೆಯಾದರೆ ವೈದ್ಯರ ಸಮಸ್ಯೆಗೆ ಪರಿಹಾರ ಸಿಗಲಿದೆ. ಆಸ್ಪತ್ರೆಗೆ ಎಕ್ಸ್‌ರೇ ಯಂತ್ರ ಖರೀದಿಗೆ ಮುಂದಾಗಿದ್ದೇವೆ. ಆಸ್ಪತ್ರೆಯ ವ್ಯವಸ್ಥೆ, ವೈದ್ಯರು ಮತ್ತು ಸಿಬ್ಬಂದಿ ಕೆಲಸದ ಬಗ್ಗೆ ದೂರು, ಸಲಹೆ ನೀಡಲು ಸಲಹಾ ಪೆಟ್ಟಿಗೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದ ಅವರು, ಜಿಲ್ಲೆಯಲ್ಲಿ 122 ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ, ನಮ್ಮ ಕ್ಲಿನಿಕ್ ಸೇರಿ ಇತರ ಆರೋಗ್ಯ ಕೇಂದ್ರಕ್ಕೆ ಬರುವ ರೋಗಿಗಳಿಗೆ ಹೆಚ್ಚಿನ ಚಿಕಿತ್ಸೆ ನೀಡಲು ಆರೋಗ್ಯ ಮೇಳಗಳು ಸಹಕಾರಿ ಎಂದರು.

ವೈದ್ಯರಾದ ಅನಿಲಕುಮಾರ ತೋಟದ, ಎಚ್.ಎಲ್ ಗಿರಡ್ಡಿ, ಶಖೀಲಅಹ್ಮದ ಮಾತನಾಡಿದರು. ಮುಖಂಡರಾದ ಸಿದ್ದಣ್ಣ ಬಂಡಿ, ಶಿವರಾಜ ಘೋರ್ಪಡೆ, ರಾಜು ಸಾಂಗ್ಲೀಕರ, ಶಶಿಧರ ಹೂಗಾರ, ಶರಣಪ್ಪ ರೇವಡಿ, ಶ್ರೀಧರ ಬಿದರಳ್ಳಿ, ಪ್ರಭು ಚವಡಿ, ಮುತ್ತಣ್ಣ ಮ್ಯಾಗೇರಿ, ಟಿಎಚ್ಒ ಬಿ.ಎಸ್ ಭಜಂತ್ರಿ, ಡಾ. ಪ್ರವೀಣ ಆನಗೌಡರ, ಡಾ. ಪ್ರೀತಿ ಬಿರಾದಾರ, ಕೆ.ಎ ಹಾದಿಮನಿ ಮುಂತಾದವರಿದ್ದರು.

> ಪಟ್ಟಣದ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ, ಎಕ್ಸ್‌ರೇ ಯಂತ್ರ ಇಲ್ಲದ ಪರಿಣಾಮ ರೋಗಿಗಳಿಗೆ ಆಗುತ್ತಿರುವ ತೊಂದರೆ, ಹೆರಿಗೆಗೆ ಬರುವವರ ಸ್ಥಿತಿ, ಆಸ್ಪತ್ರೆಯ ಅವ್ಯವಸ್ಥೆ ಬಗ್ಗೆ ದೂರು ಆಲಿಸಲು ಜಿಲ್ಲಾ, ತಾಲೂಕು ಮಟ್ಟದ ವೈದ್ಯಾಧಿಕಾರಿಗಳು ಮುಂದಾಗಬೇಕು ಎಂಬ ಸಲಹೆಯೊಂದಿಗೆ ಕೆಲ ದೂರುಗಳನ್ನು ಮುಖಂಡರಾದ ಎಚ್.ಎಸ್ ಸೋಂಪುರ, ಎ.ಡಿ ಕೋಲಕಾರ, ವೀರಣ್ಣ ಶೆಟ್ಟರ ಹಾಗೂ ಶ್ರೀಕಾಂತ ಅವಧೂತ ಪ್ರಸ್ತಾಪಿಸಿದರು.

---

**ಪತ್ರಿಕಾಗೋಷ್ಠಿಯಲ್ಲಿ ರೈತಪರ ಹೋರಾಟ ವೇದಿಕೆಯ ಮಹೇಶ ಹೊಗೆಸೊಪ್ಪಿನ್ ಆರೋಪ**

# ರೈತರ ಬೇಡಿಕೆಗಳು ಬರಿಯ ಆಶ್ವಾಸನೆಗಳಾಗಿ ಉಳಿಯುತ್ತಿವೆ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಕಳೆದ ತಿಂಗಳು ಪಟ್ಟಣದಲ್ಲಿ ರೈತರು ನಡೆಸಿದ್ದ ಬೃಹತ್ ಹೋರಾಟದ ಸಮಯದಲ್ಲಿ 9 ಬೇಡಿಕೆಗಳನ್ನು ಇಡಲಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವರು ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿ ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರು. ಆದರೆ ಮೂರು ಬೇಡಿಕೆಗಳು ಮಾತ್ರ ಈಡೇರಿದ್ದು, ಉಳಿದ ಬೇಡಿಕೆಗಳು ಆಶ್ವಾಸನೆಗಳಾಗಿಯೇ ಉಳಿಯುತ್ತಿವೆ ಎಂದು ಪಕ್ಷಾತೀತ ರೈತಪರ ಹೋರಾಟ ವೇದಿಕೆ ಅಧ್ಯಕ್ಷ ಮಹೇಶ ಹೊಗೆಸೊಪ್ಪಿನ್ ಆರೋಪಿಸಿದರು.

ಅವರು ಪಟ್ಟಣದ ಪತ್ರಿಕಾ ಕಾರ್ಯಾಲಯದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬೆಳೆ ವಿಮೆ ಕಟ್ಟಿದ ರೈತರಿಗೆ ಮಧ್ಯಂತರ ಬೆಳೆವಿಮಾ ಬಿಡುಗಡೆ ಮಾಡಬೇಕು. ರೈತರು ಬರಗಾಲದ ಬವಣೆಯಿಂದ ನೊಂದಿದ್ದಾರೆ. ಅವರ ನೋವು ನೀಗಿಸುವ ಕಾರ್ಯವನ್ನು ಸರಕಾರ ಮಾಡಬೇಕಾಗಿದೆ. ಆದರೆ ಆಶ್ವಾಸನೆಗಳನ್ನು ಮಾತ್ರ ನೀಡಿ, ರೈತರ ಮೂಗಿಗೆ ತುಪ್ಪ ಸವರುವ ಕಾರ್ಯವಾಗಬಾರದು ಎಂದು ಆಗ್ರಹಿಸಿದರು.

ಕಳೆದ ತಿಂಗಳು 28ರಂದು ರೈತ ಸಮುದಾಯದ ▶▶3ನೇ ಪುಟಕ್ಕೆ

---

**ಕಾಲುಬಾಯಿ ರೋಗ ಲಸಿಕಾ ಅಭಿಯಾನಕ್ಕೆ ಶಾಸಕ ಡಾ.ಚಂದ್ರು ಲಮಾಣಿ ಚಾಲನೆ**

# ಜಾನುವಾರುಗಳ ರೋಗದ ಬಗ್ಗೆ ನಿರ್ಲಕ್ಷ್ಯ ಬೇಡ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ರೈತರ ಜೀವನಾಡಿಗಳಾಗಿರುವ ಜಾನುವಾರಗಳಿಗೆ ಕಾಲುಬಾಯಿ ರೋಗ ಬಂದು ಅನೇಕ ಜಾನುವಾರುಗಳು ಅಸುನೀಗುವ ಘಟನೆಗಳು ನಡೆಯುತ್ತವೆ. ಕಾಲುಬಾಯಿ ರೋಗ ಬರದ ಹಾಗೆ ಮುನ್ನೆಚ್ಚರಿಕೆ ವಹಿಸುವ ನಿಟ್ಟಿನಲ್ಲಿ ಎಲ್ಲ ದನಕರುಗಳಿಗೆ ಲಸಿಕೆ ಹಾಕುವ ಯೋಜನೆ ಜಾರಿಗೆ ತಂದಿದೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಮಂಗಳವಾರ ಪಟ್ಟಣದ ಪಶು ಆಸ್ಪತ್ರೆಯಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮತ್ತು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ಇವರ ಸಹಯೋಗದಲ್ಲಿ ಕಾಲುಬಾಯಿ ರೋಗ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಗ್ರಾಮಗಳಲ್ಲಿ ನೇರವಾಗಿ ಜಾನುವಾರಗಳಿಗೆ ಲಸಿಕೆ ಕೊಡುವ ಕಾರ್ಯಕ್ರಮ ಇದಾಗಿದ್ದು, ಪಶುವೈದ್ಯರು, ಪಶುಚಿಕಿತ್ಸಕರು ರೈತರ ಮನೆಮನೆಗೆ ತೆರಳಿ ಎಲ್ಲ ಜಾನುವಾರುಗಳಿಗೆ ಕಾಲುಬಾಯಿ ರೋಗ ಬರದಂತೆ ಲಸಿಕೆ ನೀಡುತ್ತಿದ್ದಾರೆ. ರೈತ ಬಾಂಧವರ ಸಹಕಾರದಿಂದ ಕಾಲುಬಾಯಿ ರೋಗದಿಂದ ರಾಜ್ಯವನ್ನು ಮುಕ್ತವಾಗಿಸೋಣ ಎಂದು ಕರೆನೀಡಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ ಕೆ. ಆನಂದಶೀಲ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಪ್ಪ ಧರ್ಮರ, ನಿವೃತ್ತ ಹಿರಿಯ ಪಶು ಚಿಕಿತ್ಸಕ ಡಾ.ಬಾಲಚಂದ್ರ ನಾಗಸಮುದ್ರ, ಪುರಸಭೆ ಸದಸ್ಯರಾದ ಜಯಕ್ಕ ಕಳ್ಳಿ, ಮಹದೇವಪ್ಪ ಅಣ್ಣಿಗೇರಿ, ನವೀನ ಬೆಳ್ಳಟ್ಟಿ, ತಾಲೂಕಾ ಭಾರತಿಯ ಕಿಸಾನ್ ಸಂಘದ ಅಧ್ಯಕ್ಷ ಟಾಕಪ್ಪ ಸಾತಪುತೆ, ಗಂಗಾಧರ ಮೆಣಸಿನಕಾಯಿ, ಬಸವರಾಜ್ ಚಕ್ರಸಾಲಿ, ರಮೇಶ ಹಾಳದೋಟದ, ಪ್ರವೀಣಗೌಡ ಪಾಟೀಲ್, ಬಸವರಾಜ ಮಜ್ಜಿಗುಡ್ಡ, ತುಕ್ಕಪ್ಪ ಪೂಜಾರ, ಸಂಗಮೇಶ ಬೆಳವಲಕೊಪ್ಪ, ರೈತರು ಸೇರಿದಂತೆ ಎಲ್ಲಾ ಗ್ರಾ.ಪಂ ಪಶುಸಖಿಯರು ಇದ್ದರು.

> ಪಶುವೈದ್ಯಾಧಿಕಾರಿ ಡಾ. ನೀಲಕಂಠ ಹವಳದ ಮಾತನಾಡಿ, ಕಾಲುಬಾಯಿ ರೋಗ ಬರದಿರುವ ಹಾಗೆ ಮುಂಜಾಗ್ರತೆಯಾಗಿ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಪೂರ್ಣ ಸುರಕ್ಷತೆಗೆಗಾಗಿ ಮೂರು ತಿಂಗಳು ಮೇಲ್ಪಟ್ಟ ಎಲ್ಲಾ ಜಾನುವಾರಗಳಿಗೆ ಲಸಿಕೆ ಹಾಕುವುದು ಅತ್ಯಗತ್ಯ. ರೈತರ ಮನೆ ಬಾಗಿಲಿಗೆ ಹೋಗಿ ಸೆಪ್ಟೆಂಬರ್ 26ರಿಂದ ಅಕ್ಟೋಬರ್ 25ವರೆಗೂ ಲಸಿಕಾ ಅಭಿಯಾನ ನಡೆಸಲಾಗುತ್ತಿದೆ ಎಂದರು.

---

# ಅ. 2ರಂದು ಕಸಾಯಿಖಾನೆ, ಮಾಂಸ ಮಾರಾಟ ನಿಷೇದ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ನಗರಸಭೆ ವ್ಯಾಪ್ತಿಯ ಕಸಾಯಿಖಾನೆಗಳಲ್ಲಿ ಪ್ರಾಣಿವಧೆ ಮಾಡುವ ಹಾಗೂ ಮಾಂಸ ಮಾರಾಟಗಾರರಿಗೆ ತಿಳಿಯಪಡಿಸುವುದೇನೆಂದರೆ ಅಕ್ಟೋಬರ್ 02 ರಂದು ಮಹಾತ್ಮಾ ಗಾಂಧಿ ಜಯಂತಿ ಅಂಗವಾಗಿ ಜಾನುವಾರುಗಳ ವಧೆ ಹಾಗೂ ಮಾಂಸ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಮಾಂಸ ಮಾರಾಟ ಮಾಡುವುದಾಗಲಿ ಹಾಗೂ ಜಾನುವಾರುಗಳನ್ನು ವಧೆ ಮಾಡದಿರಲು ಸೂಚಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸಿದಲ್ಲಿ ಅಂಥವರ ಲೈಸನ್ಸನ್ನು ರದ್ದು ಮಾಡಲಾಗುವುದು ಎಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

# ಸೆ. 29ರಂದು ವಿಭಾಗ ಮಟ್ಟದ ದಸರಾ ಕ್ರೀಡಾಕೂಟ

**■ವಿಜಯಸಾಕ್ಷಿ ಸುದ್ದಿ, ಗದಗ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರ ಸೂಚನೆಯಂತೆ 2023-24ನೇ ಸಾಲಿನ ಬೆಂಗಳೂರು ಗ್ರಾಮಾಂತರ, ಮೈಸೂರು, ಕಲಬುರ್ಗಿ, ಬೆಳಗಾವಿ ವಿಭಾಗಗಳ ಆರ್ಚರಿ ಮತ್ತು ಫೆನ್ಸಿಂಗ್ ಕ್ರೀಡೆಗಳಿಗೆ ಸಂಬಂಧಿಸಿದಂತೆ ದಸರಾ ವಿಭಾಗ ಮಟ್ಟದ ಕ್ರೀಡಾಕೂಟವನ್ನು ಸೆಪ್ಟೆಂಬರ್ 29 ರಂದು ಬೆಂಗಳೂರಿನ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಸಂಘಟಿಸಲಾಗುತ್ತಿದೆ. ಆಯಾ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ನಿಗದಿತ ಸ್ಥಳದಲ್ಲಿ ಸೆಪ್ಟೆಂಬರ್ 28 ರ ಸಂಜೆ 5.30 ರೊಳಗೆ ವರದಿ ಮಾಡಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣ, ಗದಗ ದೂರವಾಣಿ ಸಂಖ್ಯೆ 08372-238345 ಯನ್ನು ಸಂಪರ್ಕಿಸಬಹುದಾಗಿದೆ.

---

**ಶಿಕ್ಷಣ ತಜ್ಞರ ವಿಶೇಷ ಸಭೆಯಲ್ಲಿ ವಿ.ಪ ಸದಸ್ಯ ಎಸ್.ವಿ ಸಂಕನೂರ ಅಭಿಮತ**

# ಎಸ್‌ಇಪಿ ಜಾರಿಗೆ ತರುವ ನಿರ್ಧಾರ ಕೈಬಿಡಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಕೇಂದ್ರ ಸರಕಾರ ಇತ್ತೀಚೆಗೆ ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಬದಲು ಕರ್ನಾಟಕ ಸರಕಾರ ತನ್ನದೇ ಆದ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಗುವುದು ಎಂಬ ನಿರ್ಧಾರವನ್ನು ರಾಜ್ಯ ಸರಕಾರ ಕೈಬಿಡಬೇಕೆಂದು ವಿಧಾನಪರಿಷತ್ ಸದಸ್ಯ ಎಸ್.ವ್ಹಿ. ಸಂಕನೂರ ಒತ್ತಾಯಿಸಿದರು.

ಅವರು ಗದುಗಿನ ತೋಂಟ-ದಾರ್ಯ ಕಲ್ಯಾಣ ಕೇಂದ್ರದಲ್ಲಿ ಪೀಪಲ್ಸ್ ಫೋರಂ ಫಾರ್ ಕರ್ನಾಟಕ ಎಜ್ಯುಕೇಶನ್ ಗದಗ ಏರ್ಪಡಿಸಿದ್ದ ಶಿಕ್ಷಣ ತಜ್ಞರ ವಿಶೇಷ ಸಭೆಯಲ್ಲಿ ಮಾತನಾಡಿದರು.



ಅತಿಥಿಗಳಾಗಿ ಆಗಮಿಸಿದ್ದ ಕೊಲ್ಲಾಪೂರದ ಸಂಜಯ ಗೋಡಾವತ್ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ವೆಂಕಟೇಶ ರಾಯ್ಕರ ಮಾತನಾಡಿ, ಕೇಂದ್ರ ಸರಕಾರ ಜಾರಿಗೆ ತಂದ ಹೊಸ ಶಿಕ್ಷಣ ನೀತಿಯು ದೇಶದ ಪರಂಪರೆ, ಅಗತ್ಯತೆ, ಆಸಕ್ತಿಗಳ ಹಿನ್ನೆಲೆಯೊಂದಿಗೆ ಮುಂದಿನ 20 ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಆಗಬಹುದಾದ ಬದಲಾವಣೆ, ಸುಧಾರಣೆಗಳನ್ನು ಗಮನದಲ್ಲಿರಿಸಿಕೊಂಡಿದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಬಿಪಿನ್ ಚಿಕ್ಕಟ್ಟಿ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಪ್ರೊ. ಎಸ್. ವಾಯ್ ಚಿಕ್ಕಟ್ಟಿ ಮಾತನಾಡಿ, ಹೊಸ ಶಿಕ್ಷಣ ನೀತಿಯ ಉದ್ದೇಶ ಈಡೇರಬೇಕಾದರೆ ಪ್ರತಿ ಶಿಕ್ಷಣ ಸಂಸ್ಥೆಯ ಅಧ್ಯಾಪಕರಿಗೆ, ಪಾಲಕರಿಗೆ ಈ ಕುರಿತು ಮಾಹಿತಿಯನ್ನು ನೀಡುವುದು ಅವಶ್ಯಕವಾಗಿದೆ ಎಂದರು.

ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ರಜಿಸ್ಟ್ರಾರ್ ಬಸವರಾಜ ಲಕ್ಕಣ್ಣವರ, ಡಿ.ಬಿ ಹುಯಿಲಗೋಳ, ಅನಂದ ಪೋತ್ನಿಸ್, ಜಯದೇವ ಮೆಣಸಗಿ, ಡಾ. ಪುನೀತ ಬೆನಕನವಾರಿ, ▶▶3ನೇ ಪುಟಕ್ಕೆ

> ಕರ್ನಾಟಕ ಸರ್ಕಾರವು ಇದರ ಬಗ್ಗೆ ಯಾವುದೇ ಪರಿಶೀಲನಾ ಸಮಿತಿಯನ್ನು ಮಾಡದೇ, ಅಭಿಪ್ರಾಯಗಳನ್ನು ಸಂಗ್ರಹಿಸದೇ ಏಕಪಕ್ಷೀಯವಾಗಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ತೆಗೆದುಹಾಕಿ, ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತಂದರೆ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗುತ್ತದೆ.
>
> **– ಎಸ್.ವಿ ಸಂಕನೂರ.**
> ವಿ.ಪ ಸದಸ್ಯರು.

## ಸಾಕ್ಷಿ ಸುಭಾಷಿತ

**ಒಂದು ಕ್ಷಣದ ಸಿಟ್ಟಿನಿಂದ ನೀವು ಪಾರಾದರೆ ನಾಲ್ಕು ದಿನದ ದುಃಖದಿಂದ ಪಾರಾದಿರಿ ಎಂದೇ ಅರ್ಥ.**

**–ಸ್ವಾಮಿ ವಿವೇಕಾನಂದ**

## ಸಂಪಾದಕೀಯ

# ದಕ್ಷಿಣದಲ್ಲಿ ಬಿಜೆಪಿಗೆ ಹಿನ್ನಡೆ

2024ರ ಲೋಕಸಭೆ ಚುನಾವಣೆಯಲ್ಲೂ ಭರ್ಜರಿ ಗೆಲುವು ದಾಖಲಿಸಿ ಅಧಿಕಾರದ ಕನಸು ಕಾಣುತ್ತಿರುವ ಬಿಜೆಪಿಗೆ ದಕ್ಷಿಣ ಭಾರತದ ಮಟ್ಟಿಗೆ ಬಹುದೊಡ್ಡ ಆಘಾತ ಎದುರಾಗಿದೆ.

ಎನ್‌ಡಿಎ ಮೈತ್ರಿಕೂಟದಿಂದ ತಮಿಳುನಾಡಿನ ಎಐಎಡಿಎಂಕೆ ಹೊರ ಬಂದಿರುವುದು ಸಾಕಷ್ಟು ಚರ್ಚೆಗೆ ಕಾರಣವಾಗುತ್ತಿದೆ.

ರಾಷ್ಟ್ರ ರಾಜಕಾರಣದಲ್ಲಿ ದಕ್ಷಿಣ ಭಾರತದ ರಾಜ್ಯಗಳ ರಾಜಕೀಯ ಸಂಪೂರ್ಣ ಭಿನ್ನವಾಗಿದೆ. ಕರ್ನಾಟಕ ಒಂದನ್ನು ಹೊರತುಪಡಿಸಿ ಇನ್ನುಳಿದ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳೇ ಪ್ರಾಬಲ್ಯ ಮೆರೆಯುತ್ತಿವೆ.

ದಕ್ಷಿಣ ಭಾರತದಲ್ಲಿ ಕರ್ನಾಟಕ ಮೊಟ್ಟ ಮೊದಲ ಬಾರಿಗೆ ಬಿಜೆಪಿಗೆ ಅಧಿಕಾರ ಕೊಟ್ಟ ರಾಜ್ಯ. ಆದರೆ ಇನ್ನುಳಿದ ರಾಜ್ಯಗಳಲ್ಲಿ ಬಿಜೆಪಿಗೆ ಅಧಿಕಾರ ಎನ್ನುವುದು ಹಗಲುಗನಸಾಗಿದೆ.

ಇಂತಹ ಸಂದಿಗ್ಧ ಸಮಯದಲ್ಲಿಯೇ ಎಐಎಡಿಎಂಕೆ ಮೈತ್ರಿಕೂಟದಿಂದ ಹೊರಬಂದಿರುವುದು ಬಿಜೆಪಿಗೆ ಸಂಕಷ್ಟ ಸೃಷ್ಟಿಸಿದೆ. ಚುನಾವಣಾ ಪೂರ್ವ ಸಮೀಕ್ಷೆಗಳು ಬಿಜೆಪಿಗೆ ಈ ಬಾರಿ ಮತ್ತೆ ಬಹುಮತ ಸಿಗಲಿದೆ ಎನ್ನುತ್ತಿವೆ. ಆದರೆ ಬಿಜೆಪಿ ರಾಷ್ಟ್ರೀಯ ನಾಯಕರಿಗೆ ಆವಿಶ್ವಾಸ ಇಲ್ಲ. ಆ ಕಾರಣಕ್ಕೆ ಎನ್‌ಡಿಎ ಮೈತ್ರಿಕೂಟದತ್ತ ಚಿತ್ತ ಹರಿಸಿದೆ.

ಅದರಲ್ಲೂ ಕಾಂಗ್ರೆಸ್ ಮಿತ್ರ ಪಕ್ಷಗಳು ಸೃಷ್ಟಿಸಿಕೊಂಡಿರುವ ಇಂಡಿಯಾ ಮೈತ್ರಿಕೂಟದಿಂದ ಒಂದಷ್ಟು ವಿಚಲಿತವಾಗಿರುವ ಬಿಜೆಪಿ, ಎನ್‌ಡಿಎ ಮೈತ್ರಿಕೂಟವನ್ನು ಮುನ್ನಲೆಗೆ ತರುವ ಪ್ರಯತ್ನ ಮಾಡುತ್ತಿದೆ. ಕಳೆದ ಐದು ವರ್ಷಗಳಲ್ಲಿ ಒಮ್ಮೆಯೂ ಎನ್‌ಡಿಎ ಮೈತ್ರಿಕೂಟದ ಬಗ್ಗೆ ಮಾತನಾಡದ ಬಿಜೆಪಿ ರಾಷ್ಟ್ರೀಯ ನಾಯಕರು, ವಿರೋಧಪಕ್ಷಗಳ ಮೈತ್ರಿ ಗಟ್ಟಿಯಾಗುತ್ತಿದ್ದಂತೆ ತಾನು ಸಹ ಮೈತ್ರಿಯ ಮಾತುಗಳನ್ನ ಆಡಲು ಆರಂಭಿಸಿತು.

ಉತ್ತರ ಭಾರತದಲ್ಲಿ ಬಿಜೆಪಿ ಗಟ್ಟಿಯಾಗಿದ್ದರೂ ದಕ್ಷಿಣದಲ್ಲಿ ಬಿಜೆಪಿ ಬೇರುಗಳು ಗಟ್ಟಿಯಾಗಿಲ್ಲ. ಈ ಮಧ್ಯೆ ಮೈತ್ರಿಕೂಟವೂ ಗಟ್ಟಿಯಾಗದಿರುವುದು ಬಿಜೆಪಿಗೆ ಬಹುದೊಡ್ಡ ಸವಾಲು ಎದುರಾಗಿದೆ.

## ಇಂದು (ಸೆ.27) ವಿಶ್ವ ಪ್ರವಾಸೋದ್ಯಮ ದಿನದ ನಿಮಿತ್ತ ವಿಶೇಷ ಲೇಖನ

# ಪ್ರವಾಸಿಗರ ಸ್ವರ್ಗ ಭಾರತ



ನಮ್ಮ ದೇಶ ಪ್ರವಾಸಿ ತಾಣಗಳ ತವರು ಎಂದೇ ಹೇಳಬಹುದು. ಧಾರ್ಮಿಕ ಕ್ಷೇತ್ರಗಳಿಂದ ಹಿಡಿದು, ಕಣ್ಣಿಗೆ ಮುದ ನೀಡುವ ಪ್ರಾಕೃತಿಕ ತಾಣಗಳು ಸೇರಿದಂತೆ ಪ್ರವಾಸಿಗರ ಮನ ತಣಿಸುವಷ್ಟು ವಿಭಿನ್ನವಾದ ಪ್ರವಾಸಿ ತಾಣಗಳು ನಮ್ಮ ದೇಶದಲ್ಲಿದೆ. ಕೋವಿಡ್ ಕಡಿಮೆಯಾದ ಮೇಲೆ ಪ್ರವಾಸೋದ್ಯಮ ಮತ್ತೆ ಚೇತರಿಸಿಕೊಳ್ಳುತ್ತಿದ್ದು, ಪ್ರವಾಸಿಗರ ಸಂಖ್ಯೆಯಲ್ಲಿಯೂ ಹೆಚ್ಚಳ ಕಂಡಿದೆ.

ವಿಶ್ವ ಪರ್ಯಟನೆ, ಪ್ರಪಂಚ ಸುತ್ತುವುದು, ಅಲ್ಲಿನ ಪರಿಸರ, ಜೀವನ ಶೈಲಿ, ಆಹಾರದ ಬಗ್ಗೆ ತಿಳಿದುಕೊಳ್ಳುವುದು ಪ್ರತಿಯೊಬ್ಬರ ಕನಸಾಗಿರುತ್ತದೆ. ಹೊರಗಿನ ಹೊಸ ಸ್ಥಳಗಳಿಗೆ ಪ್ರಯಾಣಿಸುವುದು ತನ್ನದೇ ಆದ ಕುತೂಹಲ ಹೊಂದಿದೆ. ಅದು ನಮ್ಮ ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ ಮತ್ತು ಉತ್ಸಾಹವನ್ನು ಹೆಚ್ಚಿಸುತ್ತದೆ.

ಪ್ರತಿ ವರ್ಷ ಸೆಪ್ಟೆಂಬರ್ 27ರಂದು ಈ ದಿನವನ್ನು ಹಬ್ಬವಾಗಿ ಆಚರಿಸಲಾಗುತ್ತದೆ. ಈ ದಿನವನ್ನು ನಿರ್ದಿಷ್ಟ ಥೀಮ್ ಹಾಗೂ ಉದ್ದೇಶದೊಂದಿಗೆ ಆಚರಿಸುತ್ತೇವೆ. 2023ರ ವಿಶ್ವ ಪ್ರವಾಸೋದ್ಯಮ ದಿನದ ಥೀಮ್ 'ಪ್ರವಾಸೋದ್ಯಮ ಮತ್ತು ಹಸಿರು ಹೂಡಿಕೆ' ಆಗಿದೆ. ಪ್ರವಾಸೋದ್ಯಮವನ್ನು ಮನರಂಜನೆಯ ಪ್ರಮುಖ ಸಾಧನವೆಂದು ಪರಿಗಣಿಸಲಾಗುತ್ತದೆ. ಏಕೆಂದರೆ ಒಬ್ಬ ವ್ಯಕ್ತಿಯು ಒಂದೇ ಸ್ಥಳದಲ್ಲಿ ವಾಸಿಸುವಾಗ ಬೇಸರಗೊಳ್ಳುತ್ತಾನೆ, ಅವನು ಹೊಸ ಸ್ಥಳಗಳು, ಪ್ರದೇಶಗಳು, ದೇಶಗಳಿಗೆ ಪ್ರಯಾಣಿಸುವಂತೆ ಮತ್ತು ಹೊಸದನ್ನು ನೋಡಬೇಕೆನಿಸುತ್ತದೆ.

ವಿಶ್ವ ಪ್ರವಾಸೋದ್ಯಮ ಸಂಸ್ಥೆಯ ಸಂವಿಧಾನವನ್ನು 1970ರಲ್ಲಿ ಅಂಗೀಕರಿಸಲಾಯಿತು. ವಿಶ್ವ ಪ್ರವಾಸೋದ್ಯಮ ದಿನವನ್ನು ಸೆಪ್ಟೆಂಬರ್ 1979ರಲ್ಲಿ ವಿಶ್ವ ಪ್ರವಾಸೋದ್ಯಮ ಸಂಸ್ಥೆಯು ಗೊತ್ತುಪಡಿಸಿತು ಮತ್ತು ಸ್ಥಾಪಿಸಿತು. ಇದನ್ನು 1980ರಲ್ಲಿ ಸೆಪ್ಟೆಂಬರ್ 27ರಿಂದ ಪ್ರಾರಂಭಿಸಲಾಯಿತು. ಅಂದಿನಿಂದ ಈ ದಿನವನ್ನು ಪ್ರತಿ ವರ್ಷ ಆಚರಿಸಲಾಗುತ್ತದೆ.

2017ರ ವರದಿಯ ಪ್ರಕಾರ, 1323 ಮಿಲಿಯನ್ ಪ್ರವಾಸಿಗರು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಪ್ರಯಾಣಿಸಿದ್ದಾರೆ. ಈ ವರ್ಷದಲ್ಲಿ, ಭಾರತವು ದಕ್ಷಿಣ ಏಷ್ಯಾದ ದೇಶಗಳಿಗೆ ಅತಿ ಹೆಚ್ಚು ವಿದೇಶಿ ಪ್ರಯಾಣಿಕರನ್ನು ಹೊಂದಿತ್ತು. ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ಭಾರತದಲ್ಲಿ ಅತೀ ಹೆಚ್ಚು ಪ್ರವಾಸಿಗರನ್ನು ಸೆಳೆಯುವ ಸ್ಥಳಗಳೆಂದರೆ, ಆಗ್ರಾದ ವಿಶ್ವವಿಖ್ಯಾತ ತಾಜ್‌ಮಹಲ್, ಆಗ್ರಾ ಕೋಟೆ, ಮೊಘಲ್ ಗಾರ್ಡನ್ಸ್, ಮೆಹ್ತಾಬ್ ಬಾಗ್, ಮದರ್ ಥೆರೇಸಾ ಮಿಷನರಿ ಚಾರಿಟಿ, ಮೋತಿ ಮಸೀದಿ, ಜಮ್ಮಾ ಮಸೀದಿ ಹೀಗೆ ಮುಂತಾದ ಸ್ಥಳಗಳು ಕೂಡ ಪ್ರವಾಸಿಗರನ್ನು ಸೆಳೆಯುತ್ತಿವೆ.

ವಿದೇಶಿಯರು ಅತೀಹೆಚ್ಚು ಭೇಟಿ ನೀಡುವ ಮತ್ತೊಂದು ಸ್ಥಳವೆಂದರೆ ಭಾರತದ ರಾಜಧಾನಿ ಹೊಸದಿಲ್ಲಿ. ಕೆಂಪುಕೋಟೆ, ಕುತುಬ್ ಮಿನಾರ್, ಲೋಟಸ್ ಟೆಂಪಲ್, ಅಕ್ಷರಧಾಮ, ರಾಷ್ಟ್ರಪತಿಭವನ್ ಇವೆಲ್ಲ ದೆಹಲಿಯ ಪ್ರಮುಖ ಪ್ರವಾಸಿ ಆಕರ್ಷಣೀಯ ಸ್ಥಳಗಳಾಗಿವೆ. ಹಂಪಿಯ ವಾಸ್ತುಕಲೆ ವಿಶ್ವಪ್ರಸಿದ್ಧವಾದದ್ದು. ವಿಜಯನಗರ ಸಾಮ್ರಾಜ್ಯದ ಗತವೈಭವ ಸಾರುವ ವಾಸ್ತುಶಿಲ್ಪವನ್ನು ಕಣ್ತುಂಬಿಕೊಳ್ಳಲು ಹಾಗೂ ಹಂಪಿಯ ಕುರಿತು ಅಧ್ಯಯನ ಮಾಡಲು ಪ್ರವಾಸಿಗರು ಭೇಟಿ ನೀಡುತ್ತಾರೆ.

ಭಾರತದಲ್ಲಿ ಬೀಚ್ ಅಂದ್ರೆ ತಕ್ಷಣ ನೆನಪಿಗೆ ಬರುವುದು ಗೋವಾ ಬೀಚ್‌ಗಳು. ಮೋಜು, ಮಸ್ತಿಗಾಗಿ ವಿದೇಶಿಯರು ಗೋವಾ ಬೀಚ್‌ಗಳಿಗೆ ಭೇಟಿ ನೀಡುತ್ತಾರೆ. ಗೇಟ್ ಆಫ್ ಇಂಡಿಯಾ, ಫಿಲಂ ಸಿಟಿ, ಹಜ್ ಅಲಿ ದರ್ಗಾ, ಈಸೆಲ್ ವರ್ಲ್ಡ್ ಇವೆಲ್ಲಾ ಇಲ್ಲಿಯ ಪ್ರಮುಖ ಆಕರ್ಷಣೀಯ ತಾಣಗಳು.

ವಿಶ್ವವಿಖ್ಯಾತ ದಸರಾದಿಂದಾಗಿ ಸಾಂಸ್ಕೃತಿಕ ನಗರಿ ಮೈಸೂರು ಪ್ರಸಿದ್ಧಿಯನ್ನು ಪಡೆದಿದ್ದು ಸಾವಿರಾರು ವಿದೇಶಿಯರು ಇಲ್ಲಿಗೆ ಭೇಟಿ ನೀಡುತ್ತಾರೆ. ಪಿಂಕ್ ಸಿಟಿ ಎಂಬ ಹೆಸರಿನ ಜೈಪುರ ರಾಜಸ್ಥಾನದ ಬಗ್ಗೆ ತಿಳಿದುಕೊಳ್ಳ ಬಯಸುವ ಎಲ್ಲರಿಗೂ ಒಂದು ಝಲಕ್ ನೀಡುವ ನಗರಿ. ಕೋಟೆ ಕೊತ್ತಲಗಳ, ಕಣ್ತುಂಬ ಬಣ್ಣ ತುಂಬುವ ದಿರಿಸುಗಳ ರಾಜರ ಹಾಗೆ ಐಷಾರಾಮಿ ಝಲಕ್ ಅನುಭವಿಸಬಯಸುವ ಮಂದಿಗೆ ಇದು ಹೇಳಿ ಮಾಡಿಸಿದ ತಾಣ.

ಕಣ್ಣು ಹಾಯಿಸಿದಲ್ಲೆಲ್ಲ ಮರಳು ದಿಬ್ಬಗಳನ್ನು ಕಣ್ತುಂಬಿಕೊಂಡು, ಮೈನವಿರೇಳಿಸುವ ಡೆಸರ್ಟ್ ಸಫಾರಿ ಮಾಡಿಕೊಂಡು, ಒಂಟೆಯ ಬೆನ್ನ ಮೇಲೆ ಕುಳಿತು ನಮೋಹಕ ದೃಶ್ಯಗಳನ್ನು ಭಾರತದೊಳಗೇ ಸವಿಬೇಕೆನ್ನುವ ಆಸೆಯ ಮಂದಿ ಖಂಡಿತವಾಗಿಯೂ ಜೈಸಲ್ಮೇರಿಗೊಮ್ಮೆ ಹೋಗಬೇಕು. ಜೊತೆಗೆ ರಾಜಸ್ಥಾನದ ಅತ್ಯದ್ಭುತ ವಾಸ್ತುಶಿಲ್ಪ, ಕಲೆ ಸಂಸ್ಕೃತಿ ಆಹಾರ ನಿಮಗೆ ಸಿಗುವ ಬೋನಸ್!

ದೇವರನಾಡು ಎಂದೇ ಹೆಸರಾದ ಕೇರಳದಲ್ಲಿ ಹೋದದ್ದೆಲ್ಲ ಪ್ರವಾಸೀ ತಾಣವೇ. ಮುನ್ನಾರ್ ಕೂಡಾ ಮುಂಚೂಣಿಯಲ್ಲಿರುವ ತಾಣ. ದಟ್ಟ ಕಾಡು, ಹೋದಷ್ಟೂ ಮುಗಿಯದ ಚಹಾ ತೋಟಗಳು, ಅಲ್ಲಲ್ಲಿ ಜಲಪಾತ ಹೀಗೆ ಹಸಿರಲ್ಲಿ ಮಿಂದೇಳಬಯಸುವ ಎಲ್ಲ ನಿಸರ್ಗ ಪ್ರಿಯರಿಗೂ ಕೇರಳವೆಂದರೆ ದೇವರನಾಡೇ.

ಸಾಹಸ ಪ್ರಿಯರನ್ನು ಸದಾ ಕೈಬೀಸಿ ಕರೆವ ಲಡಾಕ್ ಭಾರತದಲ್ಲಿ ಪ್ರವಾಸೋದ್ಯಮವನ್ನು ಉತ್ತುಂಗಕ್ಕೇರಿಸಿದ ಇನ್ನೊಂದು ಸ್ಥಳ. ಇಲ್ಲಿನ ರಮಣೀಯ ನೀಲಿ ಸರೋವರಗಳು, ಹಿಮಚ್ಛಾದಿತ ಪರ್ವತಗಳು, ಮೈನವಿರೇಳಿಸುವ ಸಾಹಸಮಯ ರಸ್ತೆಗಳ ಪಯಣ, ಬೌದ್ಧ ಮಂದಿರಗಳು, ಮರಳು ದಿಬ್ಬಗಳು ಹೀಗೆ ಕಿಚ್ಚಿರುವ ಮಂದಿಗೆ ರೋಮಾಂಚಕ ಅನುಭವ ನೀಡುವ ತಾಣ. ಈ ಪ್ರಮುಖ ಸ್ಥಳಗಳಲ್ಲದೆ , ವಾರಾಣಸಿ, ಉದಯ್‌ಪುರ್ ಮುಂತಾದ ಸ್ಥಳಗಳೂ ವಿದೇಶಿಯರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಈ ಸುದೀರ್ಘ ಪರಂಪರೆ, ಇತಿಹಾಸ ಹೊಂದಿರುವ ರಾಷ್ಟ್ರ ಪ್ರವಾಸಿಗರ ಸ್ವರ್ಗ. ನಮ್ಮ ನಾಡಿನಲ್ಲಿರುವ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಪ್ರವಾಸಿ ತಾಣಗಳನ್ನು ಗುರುತಿಸಿ ಅವುಗಳನ್ನು ಅಭಿವೃದ್ಧಿಪಡಿಸುವ ಕಾರ್ಯ ಆಗಬೇಕಿದೆ. ಈ ಕುರಿತು ಅರಿವು ಮೂಡಿಸೋಣ.



**– ಎಂ ಎಚ್ ಸವದತ್ತಿ**
ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಏಕಲಾಸಪೂರ.

# ವಿ.ಪಿ ಗಾಲಾ ನರ್ಸಿಂಗ್ ಕಾಲೇಜಿನಲ್ಲಿ ಗುರುವಂದನಾ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ಶ್ರೀ ವಿ.ಪಿ ಗಾಲಾ ನರ್ಸಿಂಗ್ ಮತ್ತು ಇನ್ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ 2006–10ನೇ ಬ್ಯಾಚ್‌ನ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ ಹಾಗೂ ಸ್ನೇಹ ಸಮ್ಮೇಳನವು ನಗರದ ಬಂಜಾರ ಭವನದಲ್ಲಿ ಜರುಗಿತು.

ಈ ಸಂದರ್ಭದಲ್ಲಿ ಎಲ್ಲ ಗುರುವೃಂದವನ್ನು ಹಿರಿಯ ವಿದ್ಯಾರ್ಥಿಗಳು ಸನ್ಮಾನಿಸಿದರು. ಸಮಾರಂಭದಲ್ಲಿ ಕಾಲೇಜಿನ ಆಡಳಿತ ಮಂಡಳಿ, ಅಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕರು, ಪ್ರಾಂಶುಪಾಲರು, ಗುರುವೃಂದ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕಿಸಾನ್ ಸಂಘದಿಂದ ಬಲರಾಮ ಜಯಂತಿ ಆಚರಣೆ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸಮೀಪದ ಶಿಗ್ಲಿ ಗ್ರಾಮದ ಬನಶಂಕರಿದೇವಿ ದೇವಸ್ಥಾನ ಕಲ್ಯಾಣ ಮಂಟಪದಲ್ಲಿ ಭಾರತೀಯ ಕಿಸಾನ್ ಸಂಘದಿಂದ ಬಲರಾಮ ಜಯಂತಿಯನ್ನು ಆಚರಿಸಲಾಯಿತು.

ಈ ವೇಳೆ ಜಿ.ಪಂ ಮಾಜಿ ಅಧ್ಯಕ್ಷ ಎಸ್.ಪಿ ಬಳಿಗಾರ ಹಾಗೂ ಭಾರತೀಯ ಕಿಸಾನ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಪುಟ್ಟಸ್ವಾಮಿ ಮಾತನಾಡಿ, ಭಾರತದಲ್ಲಿ ಕೃಷಿ ಸಂಸ್ಕೃತಿಯನ್ನು ಮೊಟ್ಟಮೊದಲು ಅಳವಡಿಸಿದವರು ಕೃಷಿಕರ ಆರಾಧ್ಯದೈವ ಬಲರಾಮ. ಆದರೆ ಇಂದು ದೇಶದಲ್ಲಿ ಅನೇಕ ಜಯಂತಿಗಳನ್ನು ಆಚರಣೆ ಮಾಡುತ್ತಿದ್ದರೂ ಕೃಷಿ ಪ್ರಧಾನವಾದ ದೇಶದಲ್ಲಿ ಇದುವರೆಗಿನ ಯಾವ ಸರಕಾರವೂ ಬಲರಾಮ ಜಯಂತಿಯನ್ನು ರಾಷ್ಟ್ರವ್ಯಾಪಿ ಆಚರಿಸಲು ಮುಂದಾಗದಿರುವುದು ದುರ್ದೈವದ ಸಂಗತಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಭಾರತಿಯ ಕಿಸಾನ್ ಸಂಘದ ಉತ್ತರ ಪ್ರಾಂತ್ಯದ ಅಧ್ಯಕ್ಷ ವಿವೇಕ ಮೂರೆ, ತಾಲೂಕು ಘಟಕದ ಅಧ್ಯಕ್ಷ ಟಾಕಪ್ಪ ಸಾತಪೂತೆ, ಸೋಮಣ್ಣ ಡಾಣಗಲ್, ಚಂದ್ರಣ್ಣ ತೋಟದ, ಅಶೋಕ ಹುಲಗೂರ, ಮಹಾಂತೇಶ ಬಮ್ಮನಕಟ್ಟಿ, ಮಹಾಂತೇಶ ಪಾಟೀಲ್ ಸೇರಿದಂತೆ ಅನೇಕರು ಹಾಜರಿದ್ದರು.

## ಸರ್ಕಾರಿ ಮಾದರಿಯ ಕೇಂದ್ರ ಶಾಲೆಯಲ್ಲಿ ಗುರುವಂದನೆ, ಸ್ನೇಹ ಸಮ್ಮಿಲನ

# ಸರ್ಕಾರಿ ಶಾಲೆಗಳ ಬಗ್ಗೆ ಅಸಡ್ಡೆ ಸಲ್ಲದು



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸಾಮಾಜಿಕವಾಗಿ ಮನಸ್ಸನ್ನು ಕೆರಳಿಸುವ ಕಾರ್ಯಗಳೇ ಸೃಷ್ಟಿಯಾಗುತ್ತಿರುವ ಸಂದರ್ಭದಲ್ಲಿ, ಮನಸ್ಸನ್ನು ಅರಳಿಸುವ ಅವಕಾಶಗಳು ವಿರಳವಾಗಿವೆ. ಇಂತಹ ಮನಸ್ಸನ್ನು ಅರಳಿಸುವ ಅಪರೂಪದ ಕಾರ್ಯಕ್ರಮಗಳಲ್ಲಿ ಗುರುವಂದನಾ ಕಾರ್ಯಕ್ರಮವು ವಿಶಿಷ್ಟ ಹಾಗೂ ಅರ್ಥಪೂರ್ಣವಾಗಿದೆ ಎಂದು ನಿವೃತ್ತ ಮುಖ್ಯಶಿಕ್ಷಕ ಮೃತ್ಯುಂಜಯ ಧಡೇಸೂರಮಠ ಹೇಳಿದರು.

ಅವರು ಪಟ್ಟಣದ ಸರ್ಕಾರಿ ಮಾದರಿಯ ಕೇಂದ್ರ ಶಾಲೆಯಲ್ಲಿ 1986ರಲ್ಲಿ 1ನೇ ತರಗತಿ ಕಲಿತ ಹಾಗೂ 1993ರಲ್ಲಿ 7ನೇ ತರಗತಿ ಪೂರೈಸಿದ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನೆ, ಸ್ನೇಹ ಸಮ್ಮಿಲನ ಸಮಾರಂಭದಲ್ಲಿ ಮಾತನಾಡಿದರು.

ಸರ್ಕಾರಿ ಶಾಲೆಗಳ ಬಗ್ಗೆ ಅಸಡ್ಡೆ ಸಲ್ಲದು. ಸರ್ಕಾರಿ ಶಾಲೆಯಲ್ಲಿ ಕಲಿತವರು ಇಂದು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಸರ್ಕಾರಿ ಶಾಲೆಗಳು ಯಾವ ಖಾಸಗಿ ಶಾಲೆಗಳಿಗೂ ಕಮ್ಮಿ ಇಲ್ಲ ಎನ್ನುವಂತೆ ಸಾಧನೆ ಮಾಡುತ್ತಿವೆ ಎಂದರು.

ಧಾರವಾಡ ಆಯುಕ್ತರ ಕಾರ್ಯಾಲಯದ ಉಪ ನಿರ್ದೇಶಕ ಎಸ್.ಬಿ ಬಿಂಗೇರಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಶಿಸ್ತು, ನಿಯಮ ಪಾಲನೆ, ಸಮಯ ಪರಿಪಾಲನೆ, ಹಲವು ಕೊರತೆಗಳ ನಡುವೆ ಜೀವನವನ್ನು ಸ್ವೀಕರಿಸುವ ಶಿಕ್ಷಣವನ್ನು ನೀಡಿದ್ದೇವೆ. ನೀವು ತೋರಿದ ಗುರುವಂದನೆಯ ಮೂಲಕ ಸಮಾಜದಲ್ಲಿ ಉಳಿಸಬಹುದಾದ ಕೃತಜ್ಞತಾ ಮೌಲ್ಯವನ್ನು ಜೀವಂತವಾಗಿರಿಸಿದ್ದೀರಿ ಎಂದರು.

ನಿವೃತ್ತ ಶಿಕ್ಷಕ ಸಿ.ಬಿ ಹಿರೇಮಠ ಮಾತನಾಡಿ, ಗುರುವಂದನೆ ಗುರು–ಶಿಷ್ಯರು ಪರಸ್ಪರ ಸಿಹಿ–ಕಹಿಗಳನ್ನ ಹಂಚಿಕೊಳ್ಳುವ ಶುಭ ಸಂದರ್ಭವಾಗಿದೆ ಎಂದರು. ಎಂ.ಪಿ ಬಸರಿಗಿಡದ, ಎಸ್.ವಿ ಕೊತಬಾಳ ಹಿರೇಮಠ, ಬಿ.ವಿ ಗೌಡರ, ಬೀಚಿ ಬಳಗದ ಅಧ್ಯಕ್ಷ ಕೆ.ಎಸ್ ಕಳಕೊಣ್ಣವರ, ಡಾ. ಕೆ.ಜಿ ಕಾಳೆ ಮಾತನಾಡಿದರು.

ಆನಂದ ಕೊಟಗಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಶಿಕ್ಷಕ ಬಿ.ಬಿ ಕುರಿ, ರವಿ ಗೆದಗೇರಿ, ನರೇಶ ಜೋಳದ, ರಾಜೇಂದ್ರ ಪುರೋಹಿತ, ರಮೇಶ ಕಳಕಣ್ಣವರ, ವಿಜಯ ಕೋಕಣೆ, ಗುರುಸಿದ್ಧಗೌಡ ಯಲ್ಲಪ್ಪಗೌಡ್ರ, ಸಂತೋಷ ಯರಂಗಳಿ, ರವಿ ಬಿಷ್ಟಕ್ಕನವರ, ಡಾ. ಕೃಷ್ಣಾ ಕಾಳೆ, ರಾಜಶೇಖರ ಸೋಮನಗೌಡ್ರ ಸೇರಿದಂತೆ ಹಳೆಯ ವಿದ್ಯಾರ್ಥಿಗಳು ಹಾಗೂ ಅವರ ಕುಟುಂಬಸ್ಥರು ಇದ್ದರು. ಎ.ಸಿ ಮರಡಿಮಠ, ಕೊಟ್ರೇಶ ಅರವಟಗಿಮಠ ನಿರ್ವಹಿಸಿದರು.

ಸಮಾರಂಭದ ನಿಮಿತ್ತ ಶಾಲಾ ದಿನಗಳ ಸಮವಸ್ತ್ರವನ್ನು ಧರಿಸಿದ್ದ ಹಳೆಯ ವಿದ್ಯಾರ್ಥಿಗಳು, ಡ್ರಮ್ ಸೆಟ್ ತಂಡವು ಗುರುಗಳನ್ನು ಸಾರೋಟಿನಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪ್ರಭಾತ ಫೇರಿ ನಡೆಸಿದ್ದು ವಿಶೇಷವಾಗಿತ್ತು. ತಮ್ಮ ಶಾಲಾ ದಿನಗಳಲ್ಲಿ ಅಡುಗೆ ತಯಾರಿಸುತ್ತಿದ್ದ ಶರಣಮ್ಮ ಕುರಿಯವರನ್ನು ಸನ್ಮಾನಿಸಿದ ವಿದ್ಯಾರ್ಥಿಗಳು ಕುರಿ ಮರಿಯೊಂದನ್ನು ಕಾಣಿಕೆ ನೀಡುವ ಮೂಲಕ ಗಮನ ಸೆಳೆದರು.

# ಪುಟ್ಟರಾಜ ಗವಾಯಿಗಳ ಪುಣ್ಯಸ್ಮರಣೆ



**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಪಟ್ಟಣದ ಚಿಂದಿಪೇಟಿ ಓಣಿಯ ಶಿವಾನಂದ ಸೌದತ್ತಿ ಅಭಿಮಾನಿ ಬಳಗದ ವತಿಯಿಂದ ಪುಟ್ಟರಾಜ ಗವಾಯಿಗಳ 13ನೇ ಪುಣ್ಯಸ್ಮರಣೆ ಹಾಗೂ ಶಂಕರ ಶಿವಾಚಾರ್ಯ ಮಾಹಾಸ್ವಾಮಿಗಳವರ 111ನೇ ಜಯಂತ್ಯುತ್ಸವದ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಅನ್ನಸಂತರ್ಪಣೆ ನೆರವೇರಿಸಿದರು.

ಶಿವಾನಂದ ಸೌದತ್ತಿ ಮಾತನಾಡಿ, ಅಂಧ ಅನಾಥರ ಶ್ರಯೋಭಿವೃದ್ಧಿಗಾಗಿ ಹಗಲಿರುಳು ಚಿಂತಿಸಿ, ಅವರಿಗಾಗಿ ಗದುಗಿನಲ್ಲಿ ಸಂಗೀತ ಪಾಠಶಾಲೆ ತೆರೆದು ಸಂಗೀತ ಲೋಕಕ್ಕೆ ಪಂ.ಪುಟ್ಟರಾಜ ಗವಾಯಿಗಳು ಕಳಶಪ್ರಾಯರಾದವರು. ಅವರು ಕಟ್ಟಿ ಬೆಳಸಿದ ಸಂಗೀತ ಮಾಹಾವಿದ್ಯಾಲಯದಲ್ಲಿ ಕಲಿತ ವಿದ್ಯಾರ್ಥಿಗಳು ಸಂಗೀತ ಕ್ಷೇತ್ರದಲ್ಲಿ ಮಾಹನ್ ಸಾಧನೆ ಮಾಡಿದ್ದಾರೆ. ಇಂತಹ ಮಹನಿಯರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯೋಣ ಎಂದರು.

ವೀರಭದ್ರಪ್ಪ ಹರ್ತಿ, ಶಿವಪ್ಪ ಹರ್ತಿ, ಬಸವಣ್ಣೆಪ್ಪ ಹರ್ತಿ, ಮಾಹಾಂತೇಶ ನೀರಜಿಡ್ಡಿ, ಶಶಿಧರ ಕಟಗಿ, ಮುರುಗೇಶ ಶಿದ್ದನಗೌಡರ, ಶಿವಯ್ಯ ಮರಿದೇವರಮಠ, ಮಾಹಾಂತೇಶ ನಪೂರಿಮಠ, ರವಿ ಹಾಳಕೇರಿ, ಮೊಹನ್ ಮದ್ದಿನ, ಬಸವರಾಜ ಸಿದ್ದನಗೌಡರ ಇದ್ದರು.

## ಗದಗ ಜಿಲ್ಲಾ ಮಾಜಿ ಸೈನಿಕರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

# ಸೈನಿಕ ತರಬೇತಿ ಕೇಂದ್ರ ಶೀಘ್ರ ಪೂರ್ಣಗೊಳ್ಳಲಿ



ಗದಗ ಜಿಲ್ಲಾ ಮಾಜಿ ಸೈನಿಕರ ಸಂಘ ಹಲವಾರು ರಚನಾತ್ಮಕ ಕಾರ್ಯಗಳ ಮೂಲಕ ಜನಮನ ಸೆಳೆದಿದೆ. ಮಾಜಿ ಸೈನಿಕರನ್ನು, ವೀರನಾರಿಯರನ್ನು ಸಂಘಟನೆಯಲ್ಲಿ ತೊಡಗಿಸುವ ಮೂಲಕ ಸಂಘ ಶಕ್ತಿಯನ್ನು ವೃದ್ಧಿಸಿದೆ. ರಾಜ್ಯ ಮತ್ತು ಕೇಂದ್ರ ಸರಕಾರದಿಂದ ಮಾಜಿ ಸೈನಿಕರಿಗೆ, ವೀರನಾರಿಯರಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಲು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿರುವದು ಅಭಿನಂದನೀಯ.

**– ಸಿ.ಎಸ್ ಹವಾಲ್ದಾರ.**
ನಿವೃತ್ತ ವಾಯು ಸೇನಾಧಿಕಾರಿ.

**■ವಿಜಯಸಾಕ್ಷಿ ಸುದ್ದಿ, ಗದಗ**

ಮಾಜಿ ಸೈನಿಕರು ದೇಶಾಭಿಮಾನ, ಶಿಸ್ತು ಮತ್ತು ಬದ್ಧತೆಗೆ ಹೆಸರಾದವರು. ಇದನ್ನು ಸಂಘಟನೆಯಲ್ಲೂ ಮುಂದುವರೆಸಿ ಸಂಘದ ಬಲವರ್ಧನೆಗೆ ಮುಂದಾಗಬೇಕೆಂದು ನಿವೃತ್ತ ವಾಯು ಸೇನಾಧಿಕಾರಿ, ಏರ್ ಕಮಡೋರ್ ಸಿ.ಎಸ್ ಹವಾಲ್ದಾರ ಅಭಿಪ್ರಾಯಪಟ್ಟರು.

ಅವರು ರವಿವಾರ ಗದುಗಿನ ಅರುಣೋದಯ ಶಾಲಾ ಕಟ್ಟಡದ ಸೇವಾ ಚೇತನ ಸಭಾಂಗಣದಲ್ಲಿ ಗದಗ ಜಿಲ್ಲಾ ಮಾಜಿ ಸೈನಿಕರ ಸಂಘ ಏರ್ಪಡಿಸಿದ್ದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ಓಂಕಾರೇಶ್ವರ ಹಿರೇಮಠದ ಪಟ್ಟಾಧ್ಯಕ್ಷರಾದ ಪೂಜ್ಯ ಫಕೀರೇಶ್ವರ ಸ್ವಾಮೀಜಿ ಮಾತನಾಡಿ, ಮಾಜಿ ಸೈನಿಕರು ನಿವೃತ್ತಿಯ ನಂತರವೂ ಕಾರ್ಯಪ್ರವೃತ್ತರಾಗಿ ಸಮಾಜಮುಖಿಯಾಗಿ ಕಾರ್ಯ ಮಾಡುತ್ತಿದ್ದಾರೆ. ಸೈನಿಕ ಸಮುದಾಯ ಭವನ ಹಾಗೂ ಸೈನಿಕ ತರಬೇತಿ ಕೇಂದ್ರ ಬೇಗ ಪೂರ್ಣಗೊಳ್ಳುವಂತಾಗಲಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಗೂಳಯ್ಯ ಮಾಲಗಿತ್ತಿಮಠ ಮಾತನಾಡಿ, ಸರ್ವ ಮಾಜಿ ಸೈನಿಕರ, ವೀರನಾರಿಯರ ಸಹಾಯ, ಸಹಕಾರದೊಂದಿಗೆ ಸಂಘವನ್ನು ಬಲಗೊಳಿಸುವ ಕಾರ್ಯ ಮುಂದುವರೆದಿದ್ದು, ಸೈನಿಕ ಸಮುದಾಯ ಭವನ ಹಾಗೂ ಸೈನಿಕ ತರಬೇತಿ ಕೇಂದ್ರದ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ನಡೆದಿದೆ. ಸಂಘದ ಸದಸ್ಯರ ಹಾಗೂ ದಾನಿಗಳಿಂದ ದೇಣಿಗೆ ಪಡೆದು ವರ್ಷದೊಳಗೆ ಪೂರ್ಣಗೊಳಿಸುವ ಸಂಕಲ್ಪ ಹೊಂದಲಾಗಿದೆ. ಈ ಕಾರ್ಯಕ್ಕೆ ಉತ್ತಮ ಸ್ಪಂದನೆ, ಪ್ರತಿಕ್ರಿಯೆ ದೊರೆಯುತ್ತಿದೆ ಎಂದರು.

ಮುಖ್ಯ ಅತಿಥಿಗಳಾಗಿ ಮಾಜಿ ಸೈನಿಕರ ಸಮನ್ವಯ ಸಮಿತಿ ರಾಷ್ಟ್ರೀಯ ಅಧ್ಯಕ್ಷ ತಿರಕನಗೌಡ ಪಾಟೀಲ, ಸಂಘದ ಮಾಜಿ ಅಧ್ಯಕ್ಷ ಅಂದಾನಪ್ಪ ಯರಗೇರಿ, ಮಾಜಿ ಉಪಾಧ್ಯಕ್ಷ ಎಸ್.ಎನ್ ಬಳ್ಳಾರಿ, ಹಾಲಿ ಮತ್ತು ಮಾಜಿ ಸೈನಿಕರ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಶೇಖಪ್ಪ ಹೊನ್ನಪ್ಪನವರ, ಗದಗ ಸೈನಿಕ ಹಾಗೂ ರೈತರ ಕ್ರೆಡಿಟ್ ಕೋ–ಆ ಸೊಸೈಟಿಯ ಅಧ್ಯಕ್ಷ ವಾಸಪ್ಪ ಶೆಟವಾಜಿ, ಸಂಘದ ಮಾಜಿ ನಿರ್ದೇಶಕಿ ಶಾಂತಮ್ಮ ಹದ್ದಲಿ, ಪ್ಯಾರಾ ಮಿಲಿಟರಿ ಹಾಲಿ ಮತ್ತು ಮಾಜಿ ಸೈನಿಕರ ಕಲ್ಯಾಣ ಸಂಘದ ಬಿ.ಜಿ ಹಿರೇಮಠ ಆಗಮಿಸಿದ್ದರು.

ಲಲಿತಾ ಕುರಹಟ್ಟಿ ಪ್ರಾರ್ಥಿಸಿದರು. ಸುಧೀರ ಘೋರ್ಪಡೆ ಸ್ವಾಗತಿಸಿದರು. ಕಾರ್ಯದರ್ಶಿ ಸಿ.ಜಿ ಸೊನ್ನದ ವರದಿ ವಾಚಿಸಿದರು. ಎಸ್. ಎಫ್ ಹೊನ್ನಪ್ಪನವರ ಹಾಗೂ ಎಚ್.ಬಿ ಜಂಗಣ್ಣವರ ಅಥಾವೆ ಪತ್ರಿಕೆ, ಅಂದಾಜು ಪತ್ರಿಕೆಯನ್ನು ಮಂಡಿಸಿದರು, ಉಪಾಧ್ಯಕ್ಷ ಎಸ್. ಆರ್ ಪಾಟೀಲ ನಿರೂಪಿಸಿದರು. ವ್ಹಿ.ಬಿ ಬಿಂಗಿ ವಂದಿಸಿದರು.

ಕಾರ್ಯಕ್ರಮದಲ್ಲಿ ಬಿ.ವ್ಹಿ ಅಬ್ಬಿಗೇರಿ, ಎಸ್.ಬಿ ಸರ್ವಿ, ಜಿ.ಬಿ ಅರವಟಗಿಮಠ, ಕೆ.ಎಸ್ ಹಿರೇಮಠ, ಎ.ಎಂ ತಹಸೀಲ್ದಾರ, ಶಿವಲೀಲಾ ಬಾವಿಕಟ್ಟಿ, ಶರೀಫ ಹಿರೇಹಾಳ, ಮಹೇಶ ಆಸಿ ಮುಂತಾದವರು ಪಾಲ್ಗೊಂಡಿದ್ದರು.

# ಕಸ ಗುಡಿಸುವ ಮೂಲಕ ಸ್ವಚ್ಛತಾ ಜಾಗೃತಿ ಮೂಡಿಸಿದ ಗ್ರಾ.ಪಂ ಅಧ್ಯಕ್ಷ



**■ವಿಜಯಸಾಕ್ಷಿ ಸುದ್ದಿ, ರೋಣ**

ಗ್ರಾಮ ಸ್ವಚ್ಛತೆಯಿಂದ ಕೂಡಿರಬೇಕು, ಗ್ರಾಮಸ್ಥರು ಸಹಕರಿಸಬೇಕು ಎಂಬ ಮಾತುಗಳು ಕೇಳಿ ಬರುವುದು ಸಹಜ. ಆದರೆ, ಮಾರನಬಸರಿ ಗ್ರಾ.ಪಂ ಅಧ್ಯಕ್ಷ ವೀರಣ್ಣ ಮರಡಿ ಸ್ವತಃ ಕಸ ಗುಡಿಸುವ ಮೂಲಕ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಿದ್ದು ಗ್ರಾಮಸ್ಥರ ಮೆಚ್ಚುಗೆಗೆ ಕಾರಣವಾಗಿದೆ.

ಸರಕಾರದ ನಿರ್ದೇಶನದಂತೆ ಗ್ರಾಮದಲ್ಲಿ ಮಂಗಳವಾರ ಸ್ವಚ್ಛ ಸರ್ವೇಕ್ಷಣ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸ್ವತಃ ಗ್ರಾ.ಪಂ ಅಧ್ಯಕ್ಷರೇ ಸ್ವಚ್ಛತಾ ಕಾರ್ಯಕ್ಕೆ ಮುಂದಾಗುವ ಮೂಲಕ ಜನರಲ್ಲಿ ಅರಿವು ಮೂಡಿಸಿದರು. ಇದಕ್ಕೆ ಪಿಡಿಒ ಎಸ್.ಆರ್ ಸಂಕನೂರ, ಕಾರ್ಯದರ್ಶಿ, ಸಿಬ್ಬಂದಿಗಳು ಕೈಜೋಡಿಸಿದರು.

ಹೇಳುವ ಮೊದಲು ನಾವೇ ಕೆಲಸಕ್ಕೆ ಅಣಿಯಾದರೆ ಒಳ್ಳೆಯದು. ಜನಪ್ರತಿನಿಧಿಗಳಾದ ನಾವೂ ಕೂಡ ಸ್ವಚ್ಛತೆಯ ಬಗ್ಗೆ ಅರಿವು ಹೊಂದುವುದು ಅವಶ್ಯಕವಾಗಿದ್ದು, ಗ್ರಾ.ಪಂನಿಂದ ಪ್ರತಿ ಕುಟುಂಬಗಳಿಗೆ ಕಸ ಶೇಖರಣೆ ಪರಿಕರ ವಿತರಿಸಲಾಗಿದೆ. ಸಾರ್ವಜನಿಕರು ಸದ್ಬಳಕೆ ಮಾಡಿಕೊಂಡು ಗ್ರಾ.ಪಂ ಕಸ ವಿಲೇವಾರಿ ವಾಹನದಲ್ಲಿ ಹಾಕಬೇಕು. ಸ್ವಚ್ಛತೆಯಿಂದ ಮಾತ್ರ ಆರೋಗ್ಯದಿಂದರಲು ಸಾಧ್ಯ ಎನ್ನುವುದನ್ನು ಎಲ್ಲರೂ ತಿಳಿದುಕೊಳ್ಳಬೇಕು ಎಂದು ವೀರಣ್ಣ ಮರಡಿ ಹೇಳಿದರು.

## ನೀವೂ ನಮ್ಮ ಜೊತೆ ಕೈಜೋಡಿಸಿ

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಉಚಿತ ತರಬೇತಿಗಾಗಿ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರ ಸರ್ಕಾರದ "ಪ್ರಧಾನ ಮಂತ್ರಿ ದಕ್ಷತಾ ಮತ್ತು ಕುಶಲತಾ ಸಂಪನ್ನ ಹಿತಗ್ರಾಹಿ" ಯೋಜನೆಯಡಿ ಕೌಶಲ್ಯ ಅಭಿವೃದ್ಧಿ ತರಬೇತಿಯಾದ ಟೈಲರಿಂಗ್ ಕೋರ್ಸ್ ಉಚಿತ ತರಬೇತಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಪೇರಲ್ ಟ್ರೈನಿಂಗ್ ಆಂಡ್ ಡಿಸೈನ್ ಸೆಂಟರ್, (ಎ.ಟಿ.ಡಿ.ಸಿ) ಹಾಗೂ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಇವರ ಸಹಭಾಗಿತ್ವದಲ್ಲಿ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ದಕ್ಷತಾ ಮತ್ತು ಕುಶಲತಾ ಸಂಪನ್ನ ಹಿತಗ್ರಾಹಿ ಯೋಜನೆಯಡಿ ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ 3 ತಿಂಗಳ ಕೌಶಲ್ಯಅಭಿವೃದ್ಧಿ ತರಬೇತಿಯಾದ ಟೈಲರಿಂಗ್ ಕೋರ್ಸ್ ಸೀವಿಂಗ್ ಮಷೀನ್ ಆಪರೇಟರ್ (5ನೇ ತರಗತಿ) ಉಚಿತ ಹೊಲಿಗೆ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವವರು ಗದಗ ಜಿಲ್ಲೆಯ ನಿವಾಸಿಯಾಗಿರಬೇಕು, 18 ರಿಂದ 45 ವಯೋಮಾನದವರಾಗಿರಬೇಕು, ಕನಿಷ್ಠ 5ನೇ ತರಗತಿ ಹಾಗೂ ಗರಿಷ್ಠ 12ನೇ ತರಗತಿ ಪಾಸಾಗಿರಬೇಕು. ಹಿಂದುಳಿದ ವರ್ಗಕ್ಕೆ ಸೇರಿದ ಮೇಲಿನ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಅಪೇರಲ್ ಟ್ರೈನಿಂಗ್ ಆಂಡ್ ಡಿಸೈನ್ ಸೆಂಟರ್ (ಎ.ಟಿ.ಡಿ.ಸಿ) 1ನೇ ಮಹಡಿ, ಕುಷ್ಟಗಿ ಬಿಲ್ಡಿಂಗ್, ಪಾಲಾ ಬದಾಮಿ ರಸ್ತೆ, ಬೆಟಗೇರಿ-ಗದಗ ಈ ವಿಳಾಸಕ್ಕೆ ತಿಳಿಸಲಾದ (ದೃಢೀಕೃತ) ದಾಖಲಾತಿಗಳ 3 ಪ್ರತಿಗಳೊಂದಿಗೆ ಹಾಗೂ ಇತ್ತೀಚಿನ 6 ಭಾವಚಿತ್ರದೊಂದಿಗೆ ಅಕ್ಟೋಬರ್ 6 ರೊಳಗೆ ಸಂಪರ್ಕಿಸಿ ನಿಗದಿತ ನಮೂನೆಯಲ್ಲಿ ಖುದ್ದಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ತರಬೇತಿಯು ಸಂಪೂರ್ಣ ಉಚಿತವಾಗಿದ್ದು, ಯಾವುದೇ ಕೋರ್ಸ್ ಶುಲ್ಕವನ್ನು ಪಾವತಿಸಬೇಕಿಲ್ಲ. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಯು ತರಬೇತಿ ಅವಧಿಯಲ್ಲಿ ಶೇ.90% ಹಾಜರಾತಿಯೊಂದಿಗೆ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ನಂತರ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಲ್ಲಿ ಶಿಷ್ಯವೇತನವನ್ನು ಸಹ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9844236030 / 8951625867 ಸಂಪರ್ಕಿಸಬಹುದು.

ರೋಣ ತಾಲೂಕು ಮಟ್ಟದ ಪ್ರಾಥಮಿಕ, ಪ್ರೌಢಶಾಲೆಗಳ ಕ್ರೀಡಾಕೂಟದಲ್ಲಿ ಶಾಸಕ ಜಿ.ಎಸ್ ಪಾಟೀಲ

# ಸೋಲು ಗೆಲುವಿನ ಸೋಪಾನ



> ಕ್ರೀಡೆಯಲ್ಲಿ ಮಕ್ಕಳು ಸೋಲು-ಗೆಲುವಿಗಿಂತ ಕ್ರೀಡಾ ಸ್ಪೂರ್ತಿಯಿಂದ ಭಾಗವಹಿಸಬೇಕು. ಕ್ರೀಡೆಯಲ್ಲಿ ಭಾಗವಹಿಸಿದ ಎಲ್ಲರೂ ಗೆಲ್ಲಲು ಸಾಧ್ಯವಿಲ್ಲ. ಸೋಲು-ಗೆಲುವನ್ನು ಕ್ರೀಡಾ ಮನೋಭಾವನೆಯಿಂದ ಸ್ವೀಕರಿಸಬೇಕು. ಸೋಲು ಗೆಲುವಿನ ಸೋಪಾನ. ಶ್ರಮ ವಹಿಸಿ ಸತತ ಅಭ್ಯಾಸ ಮಾಡಿದರೆ ಜಯ ದೊರೆಯುತ್ತದೆ. ಶ್ರೀ ಅನ್ನದಾನೇಶ್ವರ ಶಾಲೆ ಅಂದರೆ ಪುಣ್ಯಭೂಮಿ. ಈ ನೆಲದಲ್ಲಿ ಆಟವಾಡಲು ಬೇರೆ ಬೇರೆ ವಲಯಗಳಿಂದ ಬಂದಿರುವ ತಾವೆಲ್ಲ ಭಾಗ್ಯವಂತರು. ತಾಲೂಕು ಮಟ್ಟದ ಆಟವಾಡಲು ಬಂದ ಮಕ್ಕಳು ರಾಜ್ಯ, ರಾಷ್ಟ್ರ ಮಟ್ಟಕ್ಕೆ ತಲುಪಬೇಕು. ನೀವು ರೋಣ ತಾಲೂಕಿನ ಹೆಸರನ್ನು ರಾಜ್ಯ, ರಾಷ್ಟ್ರ ಮಟ್ಟಕ್ಕೆ ಕೊಂಡೊಯ್ಯಲು ಬೇಕಾದ ಸಹಾಯ, ಸಹಕಾರ ನೀಡಲು ನಾನು ಎಂದಿಗೂ ಸಿದ್ಧ.
>
> **- ಜಿ.ಎಸ್ ಪಾಟೀಲ.**
> ರೋಣ ಶಾಸಕರು.

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಶಿಕ್ಷಕರು ಮನಸ್ಸು ಮಾಡಿದರೆ ಏನೆಲ್ಲವನ್ನೂ ಸಾಧಿಸಬಲ್ಲರು. ಶಾಲೆಗೆ ಬರುವ ಪ್ರತಿ ಮಗುವಿನಲ್ಲಿಯೂ ಅವರು ಸದೃಢ ಮನಸ್ಸನ್ನು ನಿರ್ಮಾಣ ಮಾಡಿದರೆ ಅದರಿಂದ ಆರೋಗ್ಯವಂತ ಸಮಾಜದ ನಿರ್ಮಾಣ ತನ್ನಿಂದ ತಾನೇ ಆಗುತ್ತದೆ. ಆದ್ದರಿಂದ ಶಿಕ್ಷಕರು ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಮುಂದಾಗಬೇಕೆಂದು ರೋಣ ಶಾಸಕ ಜಿ.ಎಸ್ ಪಾಟೀಲ ಹೇಳಿದರು.

ಪಟ್ಟಣದ ಅನ್ನದಾನ ವಿಜಯ ಬಾಲಕರ ಪ್ರೌಢಶಾಲೆಯ ಕ್ರೀಡಾಂಗಣದಲ್ಲಿ ಜಿಲ್ಲಾ ಪಂಚಾಯತ, ತಾಲೂಕು ಪಂಚಾಯತ, ಶಾಲಾ ಶಿಕ್ಷಣ ಇಲಾಖೆ, ರೋಣ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಅನ್ನದಾನ ವಿಜಯ ಬಾಲಕರ ಹಾಗೂ ಬಾಲಕಿಯರ ಶಾಲೆ, ಬಸವೇಶ್ವರ ಕನ್ನಡ ಹಿರಿಯ ಪ್ರಾಥಮಿಕ ಶಾಲೆಗಳ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಜರುಗಿದ ರೋಣ ತಾಲೂಕು ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಟ್ಟದ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಕ್ಷೇತ್ರದಲ್ಲಿ ಪಠ್ಯ ಚಟುವಟಿಕೆಗಳಿಗೆ ನೀಡುವ ಆದ್ಯತೆಯನ್ನು ಪಠ್ಯೇತರ ಚಟುವಟಿಕೆಗಳಿಗೂ ನೀಡಬೇಕು. ಕ್ರೀಡೆಯಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುವುದರಿಂದ ಮಕ್ಕಳಲ್ಲಿ ದೈಹಿಕ, ಮಾನಸಿಕ ಸದೃಢತೆ ಸಾಧ್ಯ. ಯುವಜನರಿಗೆ ಕ್ರೀಡಾಭಿಮಾನವನ್ನು ಮೂಡಿಸುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಎಲ್ಲ ಶಿಕ್ಷಕರು ಮುಂದಾಗಬೇಕು ಎಂದು ಹೇಳಿದರು.


ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಎನ್.ಆರ್ ಗೌಡರ, ಅನ್ನದಾನೇಶ್ವರ ವಿವಿಧ ಸಂಸ್ಥೆಯ ಚೇರಮನ್ ವೀರಣ್ಣ ಹಳ್ಳಿ, ಆರ್.ಜಿ ಪಾಟೀಲ, ವೀರಯ್ಯ ಬಿ.ಸೋಮನಕಟ್ಟಿಮಠ, ಎಂ.ಪಿ ತಳಬಾಳ, ಸದಸ್ಯ ಎನ್.ವಿ ಲಕ್ಕನಗೌಡ್ರ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎನ್ ಹುರುಳಿ, ಕ್ಷೇತ್ರ ಸಮನ್ವಯಾಧಿಕಾರಿ ಎಂ.ಎ ಫಣಿಬಂದ, ಡಾ. ಕೆ.ಬಿ ಧನ್ನೂರ, ಶಿವನಗೌಡ ಪಾಟೀಲ, ಎ.ಎಸ್ ದಾನರಡ್ಡಿ, ವೀರಣ್ಣ ಶಟ್ಟರ, ತಾಲೂಕಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಾಧಾನ ಕಾರ್ಯದರ್ಶಿ ಸಿ.ಕೆ ಕೇಸರಿ, ಮುಖ್ಯ ಶಿಕ್ಷಕ ಎಂ.ವಿ ವೀರಾಪೂರ, ಎಸ್.ಎನ್ ಹೂಲಗೇರಿ, ಬಿ.ಜಿ ಶಿರ್ಶಿ, ಎಸ್.ಕೆ ಗಾಣಗೇರ, ಆರ್.ಎಸ್ ನರೇಗಲ್ಲ, ಎಸ್.ಬಿ. ಬೂದಿಹಾಳ, ಎ.ಟಿ ಮಳ್ಳೊಳ್ಳಿ, ಎಚ್.ಎಂ ರತ್ನಮ್ಮ, ನವ್ಯ ಕೊಡಿಕೊಪ್ಪಮಠ ಸೇರಿದಂತೆ ವಿವಿಧ ಶಾಲೆಯ ದೈಹಿಕ ಶಿಕ್ಷಕರು, ಶಾಲೆಯ ಸಿಬ್ಬಂದಿಗಳು ಇದ್ದರು.

# ಕ್ರೀಡೆಗೆ ವಯಸ್ಸಿನ ಮಿತಿ ಇಲ್ಲ

▸▸ ಮೊದಲನೇ ಪುಟದಿಂದ

ಸಮಾರಂಭದಲ್ಲಿ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕಿ ರಾಧಾ ಮಣ್ಣೂರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಶರಣು ಗೋಗೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕ ಕಲ್ಯಾಣ ಅಧಿಕಾರಿ ಕೆ.ಮಹಾಂತೇಶ ಹಾಗೂ ಸಿಬ್ಬಂದಿಗಳು, ಕ್ರೀಡಾ ಇಲಾಖೆಯ ನಿರ್ಣಾಯಕರು, ಸಂಘ-ಸಂಸ್ಥೆಗಳ ಅಧಿಕಾರಿಗಳು ಮತ್ತು ಹಿರಿಯ ಕ್ರೀಡಾಪಟುಗಳು ಸಮಾರಂಭದಲ್ಲಿ ಭಾಗಿಯಾಗಿದ್ದರು. ಎಂ.ಸಿ ವಗ್ಗಿ ಕಾರ್ಯಕ್ರಮ ನಿರೂಪಿಸಿದರು. ಆರ್.ಟಿ ನಾರಯಣಪೂರ ವಂದಿಸಿದರು.

# ಇಷ್ಟಾರ್ಥ ಸಿದ್ಧಿಗಾಗಿ ವಿಶೇಷ ಪೂಜೆ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಶ್ರೀ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಮಾರುಕಟ್ಟೆ ಪ್ರಾಂಗಣ, ಎಪಿಎಂಸಿ ಯಾರ್ಡ್‌ನಲ್ಲಿ ಶ್ರೀ ಗಜಾನನ ಉತ್ಸವ ಸಮಿತಿ ವತಿಯಿಂದ ಪ್ರತಿಷ್ಠಾಪನೆ ಮಾಡಿರುವ ಗಣಪತಿಗೆ ಹಮಾಲರ ಹಾಗೂ ಚಕ್ಕಡಿಯವರ ಜನರಲ್ ಯುನಿಯನ್ ಗದಗ-ಬೆಟಗೇರಿ ಸಂಘದ ವತಿಯಿಂದ ಮಂಗಳವಾರ ಮುಂಜಾನೆ ಇಷ್ಟಾರ್ಥ ಸಿದ್ಧಿಗಾಗಿ ವಿಶೇಷ ಪೂಜೆ ಮಾಡಿಸಿ ಎಲ್ಲರ ಕಷ್ಟಗಳು, ಸಮಸ್ಯೆಗಳು, ವಿಘ್ನಗಳು ದೂರವಾಗಲೆಂದು ಪ್ರಾರ್ಥನೆ ಸಲ್ಲಿಸಿದರು. ಪೂಜಾ ಕಾರ್ಯದಲ್ಲಿ ಹಮಾಲರ ಹಾಗೂ ಚಕ್ಕಡಿಯವರ ಜನರಲ್ ಯುನಿಯನ್ ಗದಗ-ಬೆಟಗೇರಿ ಸಂಘದ ಅಧ್ಯಕ್ಷ ಸುಭಾಷ್ ಕಟಗಿ, ಆದಪ್ಪ ಮಾರೆಪ್ಪನವರ, ಕೃಷ್ಣಪ್ಪ ದೇವರಮನಿ, ದಾವಲಸಾಬ ಕುಮನೂರ, ಹುಸೇನಸಾಬ ವಡವಿ, ಮಕ್ತುಮಸಾಬ ನಾಗನೂರ, ವೀರಪಾಕ್ಷಪ್ಪ ಪಾಲತಿ, ಗೋವಿಂದಪ್ಪ ಮುಂಡರಗಿ, ನಾಗಪ್ಪ ಕೊರ್ಲಹಳ್ಳಿ, ಶೇಖಪ್ಪ ವಾಲ್ಮೀಕಿ, ರಾಮಣ್ಣ ವಾಲ್ಮೀಕಿ, ಪ್ರತಾಪ್ ಸಿಂಗ್ ಮಳ್ಳದ ಮುಂತಾದವರು ಭಾಗವಹಿಸಿದ್ದರು.

# ರೈತರ ಬೇಡಿಕೆಗಳು ಬರಿಯ ಆಶ್ವಾಸನೆಗಳಾಗಿ ಉಳಿಯುತ್ತಿವೆ

▸▸ ಮೊದಲನೇ ಪುಟದಿಂದ

ಹೋರಾಟದಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಅವರು ಹೋರಾಟದಲ್ಲಿ ಭಾಗಿಯಾಗದೆ ರೈತರಿಗೆ ಅವಮಾನ ಮಾಡಿದ್ದರು. ಬಹಿರಂಗ ಕ್ಷಮೆಗೆ ಹೋರಾಟಗಾರರು ಒತ್ತಾಯ ಮಾಡಿದ್ದರೂ ಸಹ ಶಾಸಕರು ಈ ಕುರಿತು ಮಾತನಾಡದಿರುವದು ಖೇದಕರ. ಅವರಿಗೆ ಗಣೇಶನ ಹಬ್ಬದವರೆಗೂ ಕ್ಷಮೆಯಾಚಿಸಲು ಗಡುವು ನೀಡಲಾಗಿತ್ತು. ಆದರೆ ಇನ್ನು ಮುಂದೆ ರೈತರಿಗೆ ಅವರ ಕ್ಷಮೆಯ ಅಗತ್ಯವಿಲ್ಲ. ಇನ್ನು ಮುಂದೆ ಶಾಸಕರು ಪಾಲ್ಗೊಳ್ಳುವ ಯಾವುದೇ ಕಾರ್ಯಕ್ರಮವಿರಲಿ ಅಲ್ಲಿ ಕ್ಷೇತ್ರದ ಪ್ರತಿ ಗ್ರಾಮ, ಪಟ್ಟಣಗಳಲ್ಲಿ ರೈತ ಸಂಘಟನೆಗಳು ಕಾರ್ಯಕರ್ತರು ಕಪ್ಪು ಬಟ್ಟೆ ಪ್ರದರ್ಶನ, ಮುತ್ತಿಗೆ ಹಾಕುವುದು, ಪ್ರತಿಕೃತಿ ದಹನ ಮಾಡುವುದು ಹೀಗೆ ಅನೇಕ ಹೋರಾಟ ಕೈಗೊಳ್ಳಲಿದ್ದಾರೆ ಎಂದರು.

> ಬರುವ ಅಕ್ಟೋಬರ್ ಮೊದಲ ವಾರದಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಅವರ ಮನೆಯ ಮುಂದಿನಿಂದ ಅವರ ಪ್ರತಿಕೃತಿ ತೆಗೆದುಕೊಂಡು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಪ್ರತಿಭಟನಾ ಸ್ಥಳಕ್ಕೆ ಬಂದು ಪ್ರತಿಕೃತಿ ದಹನ ಮಾಡಲಾಗುವುದು. ಈ ಸಂದರ್ಭದಲ್ಲಿ ಧಾರವಾಡ, ಗದಗ, ಹಾವೇರಿ ಜಿಲ್ಲೆಯ ರೈತ ಸಂಘಟನೆಗಳ ಪ್ರಮುಖರು ಬಾಗವಹಿಸಲಿದ್ದಾರೆ. ನಂತರ ಹೋರಾಟ ತೀವ್ರ ಸ್ವರೂಪ ಪಡೆಯಲಿದೆ. ಇದೇ ಸೆ.29ರ ಕರ್ನಾಟಕ ಬಂದ್‌ಗೆ ನೈತಿಕ ಬೆಂಬಲವಿದ್ದು, ಅಂದು ಕೇಂದ್ರ ಅಂಚೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ಮಾಡಲಾಗುವುದು.
>
> **- ಮಹೇಶ ಹೊಗೆಸೊಪ್ಪಿನ್.**
> ಪಕ್ಷಾತೀತ ರೈತಪರ ಹೋರಾಟ ವೇದಿಕೆ ಅಧ್ಯಕ್ಷ.

ಕೃಷಿಕ ಸಮಾಜ(ನವದೆಹಲಿ) ರಾಷ್ಟ್ರ ರೈತ ಸಂಘಟನೆ ತಾಲೂಕಾಧ್ಯಕ್ಷ ಚನ್ನಪ್ಪ ಷಣ್ಮುಖಿ, ಕಿಸಾನ ಜಾಗೃತಿ ಸಂಘದ ತಾಲೂಕಾಧ್ಯಕ್ಷ ಶಿವಾನಂದ ಲಿಂಗಶೆಟ್ಟಿ, ಆನಂದ ಅಮರಶೆಟ್ಟಿ ಇದ್ದರು.

# ಎಸ್‌ಇಪಿ ಜಾರಿಗೆ ತರುವ ನಿರ್ಧಾರ ಕೈಬಿಡಿ

▸▸ ಮೊದಲನೇ ಪುಟದಿಂದ

ರಾಜೇಶ ಕುಲಕರ್ಣಿ, ರಾಜ್ಯ ಮಾನವ ಹಕ್ಕುಗಳ ಆಯೋಗದ ಮಾಜಿ ಅಧ್ಯಕ್ಷ ಡಾ. ಶೇಖರ ಸಜ್ಜನರ, ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ, ವಿವಿಧ ಶಿಕ್ಷಕ ಸಂಘಟನೆಗಳ ಮುಖ್ಯಸ್ಥರಾದ ಪಿ.ಎಚ್ ಕಡಿವಾಲ, ಬಿ.ಎಫ್ ಪೂಜಾರ, ಎಸ್.ಸಿ ನಾಗರಳ್ಳಿ, ವಿ.ಎಂ ಹಿರೇಮಠ, ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಪ್ರಾ. ಸಂದೀಪ ಬೂದಿಹಾಳ, ಮಾಜಿ ಸಿಂಡಿಕೇಟ್ ಸದಸ್ಯ ಸುಧೀಂದ್ರ ದೇಶಪಾಂಡೆ, ಗಿರೀಶ ಪಂತರ ಮತ್ತು ವಿವಿಧ ಶಾಲಾ-ಕಾಲೇಜುಗಳ ಪ್ರಾಚಾರ್ಯರು, ಪ್ರಾಧ್ಯಾಪಕರು, ಮುಖ್ಯಸ್ಥರು, ಶಿಕ್ಷಕರು ಉಪಸ್ಥಿತರಿದ್ದರು.

ಸುವರ್ಣಾ ಕಾಮಾರ್ತಿ ತಂಡದವರು ನಾಡಗೀತೆ ಹಾಡಿದರು. ಸಂಚಾಲಕ ಶಶಿಧರ ದಿಂಡೂರ ಸ್ವಾಗತಿಸಿದರು. ಪ್ರಾ. ಎಂ.ಸಿ ಕಟ್ಟಿಮನಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಬಸವರಾಜ ಟಿ.ಪಿ ನಿರೂಪಿಸಿದರು. ವೀರೇಂದ್ರ ಪಾಟೀಲ ವಂದಿಸಿದರು.

ವಿಶ್ವಕರ್ಮ ಜಯಂತಿ ಸ್ಪರ್ಧಾ ಕಾರ್ಯಕ್ರಮಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ

# ಸ್ಪರ್ಧೆಗಳಲ್ಲಿ ಭಾಗವಹಿಸುವ ಮನೋಭಾವ ಬೆಳೆಸಿಕೊಳ್ಳಿ



■ ವಿಜಯಸಾಕ್ಷಿ ಸುದ್ದಿ, ಗದಗ

ಯಾವುದೇ ಸ್ಪರ್ಧೆಯಾದರೂ, ಭಾಗವಹಿಸುವ ಮನೋಭಾವ ಮುಖ್ಯ. ವಿಶ್ವಕರ್ಮ ಜಯಂತಿ ಅಂಗವಾಗಿ ಸಮಾಜದ ಮಕ್ಕಳಲ್ಲಿ ವಿಶ್ವಕರ್ಮರ ಕುರಿತು ಹಾಗೂ ಸಮಾಜದ ಕುರಿತು ಅರಿವು ಮೂಡಿಸುವ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಅಭಿನಂದನಾರ್ಹರು. ಸ್ಪರ್ಧೆಗಳು ಪ್ರರಿಶ್ರಮ ಹಾಗೂ ಅಧ್ಯಯನದಲ್ಲಿ ತೊಡಗಿಕೊಳ್ಳುವ ಮನೋಭಾವ ಮೂಡಿಸುತ್ತವೆ.

ಮಕ್ಕಳು ಸ್ಪರ್ಧೆಗಳಲ್ಲಿ ಭಾಗವಹಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಜಿಲ್ಲಾ ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜಗೋಪಾಲ ಕಡ್ಲಿಕೊಪ್ಪ ಹೇಳಿದರು.

ಅವರು ನಗರದ ವಿಜಯನಗರ ಬಡಾವಣೆಯಲ್ಲಿರುವ ವಿಶ್ವಕರ್ಮ ಸಮುದಾಯ ಭವನದಲ್ಲಿ ವಿಶ್ವಕರ್ಮ ಜಯಂತಿ ಅಂಗವಾಗಿ ಪ್ರಾಥಮಿಕ, ಪ್ರೌಢಶಾಲಾ ಹಾಗೂ ಪದವಿಪೂರ್ವ ವಿದ್ಯಾರ್ಥಿಗಳು ಮತ್ತು ಮಹಿಳೆಯರಿಗಾಗಿ ಏರ್ಪಡಿಸಿದ್ದ ಚಿತ್ರಕಲೆ, ಪ್ರಬಂಧ, ಗಾಯನ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಹಿರಿಯ ಸಾಹಿತಿ ಬಿ.ಎಮ್ ಯರಕದ ಮಾತನಾಡಿ, ಮಕ್ಕಳಲ್ಲಿ ವಿಶ್ವಕರ್ಮರ ಹಾಗೂ ಸಮಾಜದ ಕುರಿತು ಅರಿವು ಮೂಡಿಸುವಲ್ಲಿ ಈ ಸ್ಪರ್ಧಾ ಕಾರ್ಯಕ್ರಮ ಅತ್ಯಂತ ಮಹತ್ವದ್ದು. ಸಮಾಜದ ಪ್ರತಿಯೊಬ್ಬರೂ ವಿಶ್ವಕರ್ಮರ ಕುರಿತು ತಿಳಿದುಕೊಳ್ಳಬೇಕು ಎಂದರು.

ಮುಖ್ಯೋಪಾಧ್ಯಾಯ ದ್ಯಾಮಣ್ಣ ಎಸ್.ಬಡಿಗೇರ ಮಾತನಾಡಿ, ಸ್ಪರ್ಧೆಗಳು ಪ್ರತಿಭೆಗಳ ಅನಾವರಕ್ಕೆ ಸಿಕ್ಕ ಅವಕಾಶವೆಂದು ಮಕ್ಕಳು ತಿಳಿದುಕೊಳ್ಳಬೇಕು. ಮೊಬೈಲ್ ದೂರವಿಟ್ಟು, ಸಾಂಪ್ರದಾಯಿಕ ಕಲೆಗಳಲ್ಲಿ ಆಸಕ್ತಿ ಬೆಳಸಿಕೊಂಡರೆ ಮಕ್ಕಳ ವ್ಯಕ್ತಿತ್ವ ಸರ್ವಾಂಗೀಣವಾಗಿ ಪ್ರಗತಿ ಹೊಂದುವುದು ಎಂದರು.

ವೇದಿಕೆಯಲ್ಲಿ ವಿಶ್ವಕರ್ಮ ಸಮಾಜದ ಮುಖಂಡರಾದ ಮೌನೇಶ ಸಿ.ಬಡಿಗೇರ, ಡಾ. ಸಿ.ವಿ ಬಡಿಗೇರ, ರಾಘವೇಂದ್ರ ಇಚ್ಚಂಗಿ, ಶಂಕರ್ ಪತ್ತಾರ, ಶಂಕರ್ ಕಂಚಗಾರ, ರಮೇಶ ಬಡಿಗೇರ, ಮಹೇಶ ಕಮ್ಮಾರ, ನಾರಾಯಣ ಗುಂಜಾಳ, ಗೋಪಾಲ ಬಡಿಗೇರ, ಸವಿತಾ ಬಡಿಗೇರ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ವಿಶ್ವನಾಥ ಯ.ಕಮ್ಮಾರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ಇಂದು ವಿಶ್ವ ಪ್ರವಾಸೋದ್ಯಮ ದಿನಾಚರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಗದಗ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮವನ್ನು ನಗರದ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ ಸೆಪ್ಟೆಂಬರ್ 27 ರಂದು ಬೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಪ್ರವಾಸೋದ್ಯಮ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಕಪಿಲ ಮೋಹನ, ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ ಡಾ.ರಾಮಪ್ರಸಾದ ಮನೋಹರ, ವೀರನಾರಾಯಣ ದೇವಸ್ಥಾನ ಮತ್ತು ತ್ರಿಕೂಟೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ಕೆ.ಡಿ. ಗೋಡಖಿಂಡಿ, ವೀರನಾರಾಯಣ ದೇವಸ್ಥಾನ ಮತ್ತು ತ್ರಿಕೂಟೇಶ್ವರ ದೇವಸ್ಥಾನ ಸಮಿತಿಯ ಕಾರ್ಯದರ್ಶಿಗಳಾದ ಆನಂದ ಪೋತ್ನೀಸ್ ಆಗಮಿಸುವರು.

ವಿ.ಡಿ.ಎಸ್.ಟಿ.ಸಿ. ಮಹಾ ವಿದ್ಯಾಲಯದ ಉಪನ್ಯಾಸಕರಾದ ಡಾ. ದತ್ತಪ್ರಸನ್ನ ಪಾಟೀಲ ಕರ್ನಾಟಕ ಪ್ರವಾಸಿ ಸ್ಥಳಗಳು ಕುರಿತು ಉಪನ್ಯಾಸ ನೀಡಲಿದ್ದಾರೆ. ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಕೊಟ್ರೇಶ್ವರ ವಿಭೂತಿ ಸರ್ವರಿಗೂ ಸ್ವಾಗತ ಕೋರಿದ್ದಾರೆ.

# ಪಂ.ದೀನದಯಾಳರು ಆದರ್ಶ ವ್ಯಕ್ತಿಯಾಗಿದ್ದರು



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಂಡಿತ್ ದೀನದಯಾಳ ಉಪಾಧ್ಯಾಯರ ಜಯಂತಿ ಆಚರಿಸುವುದೆಂದರೆ ಓರ್ವ ಶ್ರೇಷ್ಠ ಸಂಘಟಕನ ಜಯಂತಿಯನ್ನು ಆಚರಿಸುವುದು ಎಂದು ಅರ್ಥ. ದೀನ ದಯಾಳರು ಒಬ್ಬ ಉದಾತ್ತ ಆದರ್ಶ ವ್ಯಕ್ತಿ ಮತ್ತು ಪ್ರಚಂಡ ಸಂಘಟನಾ ಸಾಮರ್ಥ್ಯದೊಂದಿಗೆ, ಸರ್ವ ಶ್ರೇಷ್ಠ ಗುಣಗಳನ್ನು ಹೊಂದಿದವರಾಗಿದ್ದರು ಎಂದು ಬಿಜೆಪಿ ರೋಣ ಮಂಡಲ ಅಧ್ಯಕ್ಷ ಮುತ್ತಣ್ಣ ಕಡಗದ ಹೇಳಿದರು.

ಪಟ್ಟಣದಲ್ಲಿ ಸೋಮವಾರ ಪಂಡಿತ್ ದೀನದಯಾಳ ಉಪಾಧ್ಯಾಯ ಜಯಂತಿ ಕಾರ್ಯಕ್ರಮದಲ್ಲಿ ದೀನದಯಾಳರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ದೇಶ ಕಂಡ ಅತ್ಯಂತ ಸಜ್ಜನ, ಸರಳ ಸಿದ್ಧಾಂತದ ವ್ಯಕ್ತಿ ಅವರಾಗಿದ್ದರು. ದೀನದಯಾಳರು ಒಬ್ಬ ವ್ಯಕ್ತಿಯಾಗಿರದೆ ದೊಡ್ಡ ಶಕ್ತಿಯಾಗಿದ್ದರು. ಪ್ರತಿಯೊಂದು ರಂಗದಲ್ಲೂ ಅದ್ಭುತ ಪ್ರತಿಭೆಯನ್ನು ಹೊಂದಿದ್ದರು. ಅವರು ಸಾಮಾಜಿಕ ಚಿಂತಕ, ಅರ್ಥಶಾಸ್ತ್ರಜ್ಞ, ಶಿಕ್ಷಣತಜ್ಞ, ರಾಜಕಾರಣಿ, ಬರಹಗಾರ, ಪತ್ರಕರ್ತ, ವಾಗ್ಮಿ, ಸಂಘಟನಾ ಚತುರ ಮುಂತಾದ ಹಲವು ಶ್ರೇಷ್ಠ ಗುಣಗಳನ್ನು ಹೊಂದಿದ್ದರು. ಅಂತಹ ಮಹಾನ್ ಆದರ್ಶ ವ್ಯಕ್ತಿತ್ವದ ಹಾದಿಯಲ್ಲಿ ನಾವೆಲ್ಲರೂ ನಡೆಯೋಣ ಎಂದರು.

ಕಾರ್ಯಕ್ರಮದಲ್ಲಿ ಶ್ರೀಶೈಲಪ್ಪ ಬಂಡಿಹಾಳ, ಯಲ್ಲಪ್ಪ ಮಣ್ಣೊಡ್ಡರ, ಕುಮಾರಸ್ವಾಮಿ ಕೋರಧಾನ್ಯಮಠ, ಈರಪ್ಪ ಜೋಗಿ, ಮಲ್ಲಿಕಸಾಬ ರೋಣದ, ನಿಂಗಪ್ಪ ಕಣವಿ, ಮಲ್ಲಪ್ಪ ಕಾಟಿ, ಫಕೀರಪ್ಪ ಬಮಲಾಪೂರ, ರಮೇಶ ಕೋಲಕಾರ, ಕಾಸಿಮ ಬಳ್ಳಾರಿ, ಮಹೇಶ ಶಿವಶಿಂಪರ, ಸಂತೋಷ ಕಡೆತೋಟದ, ರವಿ ರಾಯಬಾಗಿ, ಹಸನ್ ಕಲೆಗಾರ ಸೇರಿದಂತೆ ಇತರರಿದ್ದರು.


**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ, ಮುಳಗುಂದ ರಸ್ತೆ, ಗದಗ
ದೂರವಾಣಿ ಸಂಖ್ಯೆ : (08372) 238783 E-mail I.D. eekuwsdbgadag@gmail.com

**ಟೆಂಡರ್ ಪ್ರಕಟಣೆ**
**(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)**

ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ Request for proposal (RFP) ಮತ್ತು ಐಟಂ ರೇಟ್‌ಗಳಡಿ ಈ ಕೆಳಕಂಡ ತಾಂತ್ರಿಕ ಅರ್ಹತೆ ಮತ್ತು ಆರ್ಥಿಕ ಅರ್ಹತೆಗಳನ್ನು ಹೊಂದಿರುವ ಸಂಸ್ಥೆ/ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿವೆ. (ದ್ವಿಲಕೋಟಿ ಪದ್ಧತಿ).

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ (ರೂ. ಗಳಲ್ಲಿ) | ಇ.ಎಂ.ಡಿ. (ರೂ. ಗಳಲ್ಲಿ) | ಬಿಡ್ ದಾಖಲೆಗಳ ಮೊತ್ತ | ಕಾಮಗಾರಿ ಪೂರ್ಣಗೊಳಿಸಲು ನಿಗಧಿತ ಅವಧಿ (ಮಳೆಗಾಲ ಅವಧಿ ಸೇರಿದಂತೆ) | ಕಾಮಗಾರಿ ಪೂರ್ಣಗೊಳಿಸಲು ನಿಗಧಿತ ಅವಧಿ (ಮಳೆಗಾಲ ಸೇರಿ) |
|---|---|---|---|---|---|---|
| **ಸಂಖ್ಯೆ:ಕಜಮಂ/ಕಾಪಾಅ/ಗದಗ/ತಾಶಾ/ತಾಸ/ಸಅ-1/2023-24/1029** | | | | | | **ದಿನಾಂಕ : 25-09-2023** |
| 1. | 2023-24 ನೇ ಸಾಲಿನ ಗದಗ-ಬೆಟಗೇರಿ ನಗರದ ಒಂದನೇ ಹಂತದ ಒಳಚರಂಡಿ ವ್ಯವಸ್ಥೆಯ ವಾರ್ಷಿಕ ದುರಸ್ಥಿ ಹಾಗೂ ನಿರ್ವಹಣೆಯಡಿ 10 ತಿಂಗಳ ಅವಧಿವರೆಗೆ ಸಹಾಯಕ ಸಿಬ್ಬಂಧಿ ಹಾಗೂ ಆಪರೇಟರ್‌ಗಳನ್ನು ಒದಗಿಸುವ ಕಾಮಗಾರಿ. | **14,43,091.60** | **36,100.00** | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪ್ರಕಾರ | **10 ತಿಂಗಳು (ಹತ್ತು ತಿಂಗಳು)** | ತಾಂತ್ರಿಕ ಮತ್ತು ಆರ್ಥಿಕ ಅರ್ಹತೆಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪೋರ್ಟಲ್‌ನಲ್ಲಿ ಇರುವಂತೆ. |
| **ಸಂಖ್ಯೆ:ಕಜಮಂ/ಕಾಪಾಅ/ಗದಗ/ತಾಶಾ/ತಾಸ/ಸಅ-1/2023-24/1030** | | | | | | **ದಿನಾಂಕ : 25-09-2023** |
| 2. | ಗದಗ-ಬೆಟಗೇರಿ ನಗರಸಭೆ ಇವರ ಠೇವಣಿ ವಂತಿಕೆ ಕಾಮಗಾರಿಯಡಿ ಗದಗ-ಬೆಟಗೇರಿ ನಗರದ ವಾರ್ಡ್ ನಂ.3 ರಲ್ಲಿ ಕೆಲವು ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿ. | **19,74,052.47** | **49,400.00** | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪ್ರಕಾರ | **60 ದಿನಗಳು** | ತಾಂತ್ರಿಕ ಮತ್ತು ಆರ್ಥಿಕ ಅರ್ಹತೆಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪೋರ್ಟಲ್‌ನಲ್ಲಿ ಇರುವಂತೆ. |

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ವಿವರಗಳನ್ನು ಇ- ಪ್ರೊಕ್ಯೂರ್‌ಮೆಂಟ್ ಸೆಲ್, ಸೆಂಟರ್ ಫಾರ್ e-ಗವರ್ನನ್ಸ್ ಕೊಠಡಿ ಸಂಖ್ಯೆ: 109, ಗೇಟ್ ನಂ: 2, ಎಮ್.ಎಸ್. ಬಿಲ್ಡಿಂಗ್, ಬೆಂಗಳೂರು - 560001 ಫೋನ್ ಸಂಖ್ಯೆ : **080-46010000/68948777** ಇವರಿಂದ ಪಡೆಯಬಹುದಾಗಿದೆ.

**ಷರತ್ತು ಮತ್ತು ನಿಬಂಧನೆಗಳು :** (1) ಮೇಲೆ ತಿಳಿಸಿರುವ ಕಾಮಗಾರಿಗೆ ಭಾಗವಹಿಸಲು ಮಂಡಳಿಯಿಂದ ಗುತ್ತಿಗೆ ನೋಂದಣಿ ಪಡೆಯುವುದು ಕಡ್ಡಾಯವಾಗಿರುವುದಿಲ್ಲ. (2) ಟೆಂಡರ್‌ದಾರರು ಭದ್ರತಾ ಠೇವಣಿ ಹಣ (ಇ.ಎಂ.ಡಿ) /ಬಿಡ್ ಭದ್ರತೆಗಳನ್ನು ಬಿಡ್ಡಿಂಗ್ ಡಾಕ್ಯೂಮೆಂಟ್‌ನಲ್ಲಿ ಸೂಚಿಸಿರುವ ರೂಪದಲ್ಲಿ ಪಾವತಿಸುವುದು. (3) ಯಾವುದೇ ಟೆಂಡರ್‌ನ್ನು ಪುರಸ್ಕರಿಸುವ ಮತ್ತು ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಅಭಿಯಂತರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ ವಿಭಾಗ ಗದಗ ಇವರು ಹೊಂದಿರುತ್ತಾರೆ. (4) ವಿವಿಧ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಹಾಗೂ ಬಿಡ್ ಸಲ್ಲಿಸುವ ಸಮಯದಲ್ಲಿ ಬಿಡ್ ದಾಖಲೆಗಳ ವಿವಿಧ ಅಧ್ಯಾಯಗಳಲ್ಲಿ ತಿಳಿಸಿರುವ ವಿವಿಧ ನಮೂನೆಗಳನ್ನು ಭರ್ತಿ ಮಾಡಿ ಬಿಡ್‌ಗಳೊಂದಿಗೆ ಅಪ್ಲೋಡ್ ಮಾಡುವುದು ಕಡ್ಡಾಯವಾಗಿದೆ. ಅಪೂರ್ಣ ಬಿಡ್‌ಗಳನ್ನು ಅಯಶಸ್ವಿ ಬಿಡ್ ಎಂದು ಪರಿಗಣಿಸಲಾಗುವುದು.

**ವಿವರಗಳು, ವಿಶ್ಲೇಷಣೆಗಳು ಮತ್ತು ಇತರೆ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.**

**ಟೆಂಡರ್ ದಿನಾಂಕಗಳು :** (1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಲು ಪ್ರಾರಂಭ ದಿನಾಂಕ ಮತ್ತು ಸಮಯ : **27-09-2023** ರಂದು 11.00 ಗಂಟೆಯ ನಂತರ (2) ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **11-10-2023** ರಂದು 17.00 ಗಂಟೆಯ ವರೆಗೆ (3) ಬಿಡ್ ದಾಖಲಾತಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : **13-10-2023** ರಂದು 17.30 ಗಂಟೆಯ ವರೆಗೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **16-10-2023** ರಂದು 11.00 ಗಂಟೆಯ ನಂತರ (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : ಅರ್ಹ ಗುತ್ತಿಗೆದಾರರಿಗೆ ನಂತರ ಪ್ರತ್ಯೇಕವಾಗಿ ಮಾಹಿತಿ ನೀಡಲಾಗುವುದು.

ಹೆಚ್ಚಿನ ವಿವರಗಳನ್ನು ಕಾರ್ಯಪಾಲಕ ಅಭಿಯಂತರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ ವಿಭಾಗ ಗದಗ ಇವರ ಕಛೇರಿಯಿಂದ ಪಡೆಯಬಹುದು.

**ಸಹಿ/- ಕಾರ್ಯಪಾಲಕ ಅಭಿಯಂತರರು,**
**ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಗದಗ**

ವಾಸಾಸಂಇ/ಗದಗ/ಕೆ.ಎಸ್.ಎಂ.ಸಿ.ಎ/208/2023-24

# ಪಂ. ದೀನದಯಾಳ ಉಪಾಧ್ಯಾಯರ ಜಯಂತಿ ಆಚರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ಕಾರ್ಯಾಲಯದಲ್ಲಿ ಪಂಡಿತ್ ದೀನದಯಾಳ ಉಪಾಧ್ಯಾಯರ ಜಯಂತಿ ಆಚರಿಸಲಾಯಿತು.

ಬಿಜೆಪಿ ಗದಗ ಜಿಲ್ಲಾಧ್ಯಕ್ಷರಾದ ಮುತ್ತಣ್ಣ ಲಿಂಗನಗೌಡ್ರ, ಪಕ್ಷದ ಹಿರಿಯರಾದ ಶ್ರೀಪತಿ ಉಡುಪಿ, ಎಂ.ಎಸ್ ಕರಿಗೌಡ್ರ, ಡಾ. ಶೇಖರ್ ಸಜ್ಜನರ ಪಂ. ಉಪಾಧ್ಯಾಯರ ಕುರಿತು ಸವಿಸ್ತಾರವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮಾಧವ ಗಣಾಚಾರಿ, ಶಿದ್ರಾಮಪ್ಪ ಮೊರಬದ, ಗದಗ ನಗರ ಮಂಡಲ ಅಧ್ಯಕ್ಷ ಅನಿಲ ಅಬ್ಬಿಗೇರಿ, ಗದಗ-ಬೆಟಗೇರಿ ನಗರಸಭಾಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಪ್ರಮುಖರಾದ ಜಗನ್ನಾಥಸಾ ಬಾಂಡಗೆ, ರವಿ ದಂಡಿನ, ಸಿದ್ದು ಪಲ್ಲೇದ, ಅಶೋಕ ಕುಡತಿನಿ, ಸುಧೀರ ಕಾಟಿಗರ, ಶಂಕರ ಕರಿಬಿಷ್ಠಿ, ಮಹಾಂತೇಶ ನಲವಡಿ, ಶಶಿಧರ ದಿಂಡೂರ, ರಮೇಶ ಸಜ್ಜಗಾರ, ಮಂಜು ಶಾಂತಗೇರಿ, ಸಂತೋಷ ಅಕ್ಕಿ, ಹನಮಂತಪ್ಪ ದಿಂಡಣ್ಣವರ, ಪ್ರದೀಪ ಮುತ್ತಾಳ, ವೆಂಕಟೇಶ ಬಳ್ಳಾರಿ, ಮಹೇಶ ದಾಸರ, ಶಾರದಾ ಸಜ್ಜನ, ಅಶ್ವಿನಿ ಜಗತಾಪ್, ರತ್ನಾ ದಾಸರ, ನಿರ್ಮಲಾ ಕೊಳ್ಳಿ, ಕಮಲಾಕ್ಷೀ ಗೊಂದಿ, ವಿಜಯಲಕ್ಷ್ಮೀ ಮಾನ್ವಿ, ಜಯಶ್ರೀ ಉಗಲಾಟದ, ವಂದನಾ ವರ್ಣೇಕರ, ಪಾರ್ವತಿ ಪಟ್ಟಣಶೆಟ್ಟಿ, ಲತಾ ಮುತ್ತಿನಪೆಂಡಿಮಠ, ಅಕ್ಕಮ್ಮ ವಸ್ತ್ರದ, ರೇಖಾ ಬಂಗಾರಶೆಟ್ಟರ, ವಿನೋದ ಹಂಸನೂರ ಮುಂತಾದ ಪ್ರಮುಖರು ಉಪಸ್ಥಿತರಿದ್ದರು.

# 22ನೇ ವಾರ್ಡ್‌ನ್ನು ಅಭಿವೃದ್ಧಿಪಡಿಸಲು ಮನವಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ 22ನೇ ವಾರ್ಡ್‌ನಲ್ಲಿ ಮೂಲ ಸೌಲಭ್ಯ ಕಲ್ಪಿಸಬೇಕೆಂದು ಆಗ್ರಹಿಸಿ ಸೋಮವಾರ ವಾರ್ಡ್‌ನ ನಿವಾಸಿಗಳು ಪುರಸಭೆಗೆ ತೆರಳಿ, ಕೆಲಹೊತ್ತು ಪ್ರತಿಭಟನೆ ನಡೆಸಿ ಪುರಸಭೆ ವ್ಯವಸ್ಥಾಪಕಿ ಮಂಜುಳಾ ಹೂಗಾರ ಅವರಿಗೆ ಮನವಿ ಸಲ್ಲಿಸಿದರು.

22ನೇ ವಾರ್ಡ್‌ನ ಲಕ್ಷ್ಮೇಶ್ವರ ಹಿತಾಭಿವೃದ್ಧಿ ಸಂಘಟನೆಯ ಗೌರವಾಧ್ಯಕ್ಷ ನಿಸಾರ್ ಅಹ್ಮದ್ ಹುಲಗೇರಿ ಮಾತನಾಡಿ, ಇಲ್ಲಿನ ನಿವಾಸಿಗಳು ಕಳೆದ 30 ವರ್ಷಗಳಿಂದ ಮೂಲಭೂತ ಸೌಲಭ್ಯಗಳಿಗಾಗಿ ಪರಿತಪಿಸುವಂತಾಗಿದೆ. ವಾರ್ಡ್‌ನಲ್ಲಿ ಎಲ್ಲಿ ಹುಡುಕಿದರೂ ಒಂದಡಿ ಸುಸಜ್ಜಿತವಾದ ರಸ್ತೆ ಮತ್ತು ಚರಂಡಿ ಇಲ್ಲ. ಇದರಿಂದಾಗಿ ನಿವಾಸಿಗಳಿಗೆ ತೀವ್ರ ತೊಂದರೆ ಉಂಟಾಗಿದೆ. ಕೂಡಲೇ ಪುರಸಭೆ 22ನೇ ವಾರ್ಡ್‌ನ್ನು ಸಂಪೂರ್ಣ ಅಭಿವೃದ್ಧಿಪಡಿಸಬೇಕು ಎಂದರು.

ಸಂಘಟನೆಯ ಕಾರ್ಯಾಧ್ಯಕ್ಷ ಶಂಕ್ರಣ್ಣ ಆದಿ ಮಾತನಾಡಿ, ನಿವಾಸಿಗಳು ಪುರಭೆಗೆ ತೆರಿಗೆ ಕಟ್ಟುತ್ತಿದ್ದರೂ ಅಭಿವೃದ್ಧಿ ಮಾತ್ರ ಮರೀಚಿಕೆಯಾಗಿದೆ.

ಸುಸಜ್ಜಿತವಾದ ರಸ್ತೆ, ಚರಂಡಿ, ಬೀದಿ ದೀಪಗಳ ವ್ಯವಸ್ಥೆಯಿಲ್ಲ. ವಾರ್ಡ್‌ನ ಯಾವುದೇ ಅಭಿವೃದ್ಧಿಗೆ ಮುಂದಾಗದಿದ್ದರೆ ಪುರಸಭೆಗೆ ಬೀಗ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದರು.

ಸಂಘಟನೆಯ ಸಂಚಾಲಕ ಇಸಾಕ್‌ಅಹಮ್ಮದ್ ಹರಪನಹಳ್ಳಿ, ಪುಟ್ಟರಾಜು, ದಾದಾಪೀರ್ ಗದಗ, ಮೊಯಿನುದ್ದೀನ್ ಮುಂಡರಗಿ, ಸತೀಶ ಬೋಮಲೆ, ಮಹಮ್ಮದ್ ಸಾದಿಕ್ ಹುಲಗೇರಿ, ಡಿ.ಎನ್ ದೊಡ್ಡಮನಿ, ಫಯಾಜ್ ಸುಂಡಕೆ, ಶಶಿ ಬಳ್ಳಾರಿಮಠ, ಆನಂದ ಹಬೀಬ, ಇರ್ಫಾನ್ ಮಿರ್ಜಾ, ರಾಜು, ಮಹಮ್ಮದ್ ಹನೀಫ್, ಸಂಜೀವ ಹಸರಾಣಿ, ಲಕ್ಷ್ಮಣ ಧರ್ಮದಾಸ ಮತ್ತಿತರರಿದ್ದರು.

# ತಮಿಳುನಾಡಿಗೆ ಕಾವೇರಿ ನೀರನ್ನು ಬಿಡದಂತೆ ಮನವಿ



■ ವಿಜಯಸಾಕ್ಷಿ ಸುದ್ದಿ, ಗದಗ

ತಮಿಳುನಾಡಿಗೆ ಕಾವೇರಿ ನೀರನ್ನು ಬಿಡದಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ನಮ್ಮ ಕರ್ನಾಟಕ ಸೇನೆ ಗದಗ ಘಟಕದ ವತಿಯಿಂದ ಗದಗ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಸಂಘಟನೆಯ ಜಿಲ್ಲಾಧ್ಯಕ್ಷ ಭೀಮಣ್ಣ ಇಂಗಳೆ ಮನವಿ ಸಲ್ಲಿಸಿ ಮಾತನಾಡಿ, ಕಾವೇರಿ ನೀರನ್ನು ನಂಬಿ ವ್ಯವಸಾಯ ಮಾಡುವ ನಮ್ಮ ನಾಡಿನ ರೈತರಿಗೆ ನೀರಿನ ಅವಶ್ಯಕತೆ ಹೆಚ್ಚಾಗಿದೆ. ಹೀಗಿರುವಾಗ, ಕಾವೇರಿ ನೀರು ನಿಯಂತ್ರಣ ಮಂಡಳಿ ತಮಿಳುನಾಡಿಗೆ ನೀರು ಹರಿಸಲು ಆದೇಶಿಸಿರುವುದು ಕನ್ನಡ ನಾಡಿಗೆ ದ್ರೋಹವೆಸಗಿದಂತಾಗಿದೆ. ಯಾವುದೇ ಕಾರಣಕ್ಕೂ ರಾಜ್ಯ ಸರಕಾರ ತಮಿಳುನಾಡಿಗೆ ಕಾವೇರಿ ನೀರನ್ನು ಬಿಡಬಾರದು ಎಂದು ಮನವಿ ಮೂಲಕ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಗದೀಶ ಮಡಿವಾಳರ, ವಿರೇಶ ಶಿವಶಿಂಪಗೇರಿ, ವೀರಣ್ಣ ಮ್ಯಾಗೇರಿ, ಕಳಕಪ್ಪ ಹೊಸಮನಿ, ಷಣ್ಮುಖ ಕಾತರಕಿ, ಶಿವಪ್ಪ ಕೊಡಿಮಟ್ಟಿ, ಬಸವರಾಜ ಯಲಬುರ್ಗಿ, ಶರಣಪ್ಪ ಯಲಬುರ್ಗಿ, ಕಳಕಪ್ಪ ಹಾಳಕೇರಿ, ಮುತ್ತಣ್ಣ ರೇಣಿ, ಈರಣ್ಣ ಮಡಿವಾಳರ, ರಾಜು ಕೊರ್ತಗೌಡ್ರ, ಇಬ್ರಾಹಿಂ ಮಾಲ್ದಾರ ಮುಂತಾದವರು ಉಪಸ್ಥಿತರಿದ್ದರು.

### ಬರಗಾಲ ನಿರ್ವಹಣೆ ಕುರಿತ ಸಭೆಯಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಸೂಚನೆ

# ರೈತರಿಗೆ ಮಧ್ಯಂತರ ವಿಮಾ ಪರಿಹಾರ ಒದಗಿಸಿ



■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿ ತಾಲೂಕನ್ನು ಸರಕಾರ ಈಗಾಗಲೇ ಬರಗಾಲ ಪೀಡಿತ ತಾಲೂಕು ಎಂದು ಘೋಷಣೆ ಮಾಡಿದೆ. ಆದ್ದರಿಂದ ವಿಮಾ ಕಂಪನಿಯವರು ವಿಮೆ ತುಂಬಿದ ತಾಲೂಕಿನ ಎಲ್ಲ ರೈತರಿಗೂ ಮಧ್ಯಂತರ ಪರಿಹಾರ ಒದಗಿಸಬೇಕು. ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಮಂಗಳವಾರ ಶಿರಹಟ್ಟಿಯ ತಹಸೀಲ್ದಾರ ಕಚೇರಿಯಲ್ಲಿ ಬರಗಾಲ ನಿರ್ವಹಣೆ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಶಿರಹಟ್ಟಿ ತಾಲೂಕಿನಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ 9078 ರೈತರು ವಿವಿಧ ಬೆಳೆಗಳಿಗೆ ಇನ್ಸುರನ್ಸ್ ಪ್ರೀಮಿಯಂ ಕಟ್ಟಿದ್ದಾರೆ. ಆದರೆ ಇತ್ತೀಚೆಗೆ ಶೇಂಗಾ ಬೆಳೆಗೆ 1732 ರೈತರು ಪ್ರಿಮಿಯಂ ತುಂಬಿದ್ದು, ಇದರಲ್ಲಿ ಕೇವಲ 2 ರೈತರ ಜಮೀನುಗಳಿಗೆ ತೆರಳಿ ಕ್ರಾಪ್ ಕಟಿಂಗ್ ಮಾಡಿ, ಉಳಿದವೆಲ್ಲ ಹಾರ್ವೆಸ್ಟಿಂಗ್ ಆಗಿದೆ ಎಂದು ಹೇಳುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ಯಾವ ಮಾನದಂಡದ ಮೇಲೆ ನೀವು ಕ್ರಾಪ್ ಕಟಿಂಗ್ ಮಾಡುತ್ತೀರಿ? ಇಷ್ಟು ವರ್ಷದಲ್ಲಿ ಒಮ್ಮೆಯಾದರೂ ರೈತರಿಗೆ ಮಧ್ಯಂತರ ಪರಿಹಾರ ಏಕೆ ನೀಡಿಲ್ಲ? ಎಂದು ವಿಮಾ ಸಿಬ್ಬಂದಿಗಳ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿದರು.

> ನೀವೆಲ್ಲರೂ ಸೇರಿ ಕಂಪನಿಗೆ ಲಾಭ ಮಾಡುತ್ತಿದ್ದೀರಿ. ರೈತರು ಸಾಲ ಮಾಡಿ ಬಿತ್ತನೆ ಮಾಡಿದ್ದು, ಸಕಾಲಕ್ಕೆ ಮಳೆ ಬಾರದೆ ತೀವ್ರ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ವಾಸ್ತವಾಂಶವನ್ನು ನಿಮ್ಮ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ನಮ್ಮೆಲ್ಲ ರೈತರಿಗೆ ಮಧ್ಯಂತರ ವಿಮಾ ಪರಿಹಾರ ಸಿಗುವಂತೆ ಪ್ರಯತ್ನಿಸಬೇಕು.
>
> – ಡಾ. ಚಂದ್ರು ಲಮಾಣಿ.
> ಶಾಸಕರು, ಶಿರಹಟ್ಟಿ.

ತಾ.ಪಂ ಇಓ ಡಾ. ಎನ್.ಎಚ್ ಓಲೇಕಾರ ಮಾತನಾಡಿ, ವಿಮಾ ಕಂಪನಿಯ ಸಿಬ್ಬಂದಿಗಳು ಕಂಪನಿಯ ಲಾಭಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ತಾಲೂಕಿನ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ರೈತರು ಗುಳೇ ಹೋಗುತ್ತಿದ್ದಾರೆ. ಅವೈಜ್ಞಾನಿಕವಾಗಿ ಕ್ರಾಪ್ ಕಟಿಂಗ್ ಮಾಡಿ ರೈತರಿಗೆ ಅನ್ಯಾಯ ಮಾಡುತ್ತಿರುವುದು ಸರಿಯಲ್ಲ. ಶಾಸಕರ ನಿರ್ದೇಶನದಂತೆ ಈ ಕೂಡಲೇ ನಮ್ಮ ತಾಲೂಕಿನಲ್ಲಿ ಪ್ರೀಮಿಯಂ ತುಂಬಿದ ಎಲ್ಲ ರೈತರಿಗೂ ಮಧ್ಯಂತರ ಪರಿಹಾರ ಸಿಗುವ ನಿಟ್ಟಿನಲ್ಲಿ ಕೆಲಸ ಮಾಡಿ ಎಂದರು.

ತಹಸೀಲ್ದಾರ ಅನಿಲ ಬಡಿಗೇರ ಮಾತನಾಡಿ, ರೈತರ ಹಿತಾಸಕ್ತಿ ಕಾಪಾಡುವುದಕ್ಕಾಗಿ ವಿಮಾ ಕಂಪನಿಯ ಸಿಬ್ಬಂದಿಗಳು ಮಧ್ಯಂತರ ವಿಮಾ ಪರಿಹಾರ ದೊರಕಿಸಿಕೊಡಲು ಮೇಲಾಧಿಕಾರಿಗಳೊಂದಿಗೆ ಚರ್ಚಿಸಬೇಕೆಂದು ಹೇಳಿದರು. ಎಡಿಎಚ್ ಸುರೇಶ ಕುಂಬಾರ, ಎಡಿಎ ರೇವಣೆಪ್ಪ ಮನಗೂಳಿ, ಮುಖ್ಯಾಧಿಕಾರಿ ಸಿದ್ದರಾಯ ಕಟ್ಟಿಮನಿ, ಪಿಆರ್‌ಇಡಿ ಎಇ ಸಂತೋಷ ಲಮಾಣಿ, ವಿಮಾ ಕಂಪನಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದಲ್ಲಿ ನಗರೋತ್ಥಾನ ಮತ್ತು ವಿವಿಧ ಯೋಜನೆಯಡಿ ನಡೆಯುತ್ತಿರುವ ರಸ್ತೆ, ಚರಂಡಿ ನಿರ್ಮಾಣದ ಕಾಮಗಾರಿಗಳನ್ನು ಮಂಗಳವಾರ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅವರು ಪರಿಶೀಲಿಸಿದರು.

ಪಟ್ಟಣದ ಪುರಸಭೆ ಮುಂದಿನ ಮುಖ್ಯ ಬಜಾರ್ ರಸ್ತೆ, ಲಕ್ಷ್ಮೀ ನಗರ ಸೇರಿ ವಿವಿಧ ವಾರ್ಡ್‌ಗಳಲ್ಲಿ ನಡೆಯುತ್ತಿರುವ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿ, ಕಾಮಗಾರಿಗಳು ಗುಣಮಟ್ಟದದಿಂದ ಕೂಡಿರಬೇಕು. ಕಳಪೆ ಕಾಮಗಾರಿ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ತಹಸೀಲ್ದಾರ ಕೆ.ಆನಂದಶೀಲ, ಜಿಲ್ಲಾ ನಗರಾಭಿವೃದ್ಧಿ ಕೋಶದ ಅಧಿಕಾರಿ ಮಾರುತಿ ಬ್ಯಾಕೋಡ, ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ, ಬಸವರಾಜ ಗುಳೇರ ಸೇರಿ ಅಭಿಯಂತರರು, ಸಿಬ್ಬಂದಿಗಳಿದ್ದರು.

# ಡಾ. ಪಂ. ಪುಟ್ಟರಾಜ ಗವಾಯಿಗಳ ಪುಣ್ಯಸ್ಮರಣೋತ್ಸವ



■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಡಾ. ಪಂಡಿತ್ ಪುಟ್ಟರಾಜ ಗವಾಯಿಗಳವರ ಸದ್ಭಕ್ತ ವೃಂದದಿಂದ ಗಾನಯೋಗಿ ಶಿವಯೋಗಿ ಪದ್ಮಭೂಷಣ ಡಾ.ಪಂಡಿತ್ ಪುಟ್ಟರಾಜ ಗವಾಯಿಗಳವರ 13ನೇ ಪುಣ್ಯಸ್ಮರಣೆ ಕಾರ್ಯಕ್ರಮ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಪರಮಪೂಜ್ಯ ಶ್ರೀ ಕಲ್ಲಯ್ಯಜ್ಜನವರ ಸಾನ್ನಿಧ್ಯದಲ್ಲಿ, ಕರವೇ ಯುವ ಘಟಕದ ಜಿಲ್ಲಾಧ್ಯಕ್ಷ ನಿಂಗನಗೌಡ ಎಸ್.ಮಾಲಿಪಾಟೀಲ್ ನೇತೃತ್ವದಲ್ಲಿ ಅನ್ನ ಸಂತರ್ಪಣೆ ನೆರವೇರಿಸಲಾಯಿತು. ಮಹಾ ಅನ್ನಸಂತರ್ಪಣೆಗೆ ಶಹರ ಪೊಲೀಸ್ ಠಾಣೆಯ ಸಿಪಿಐ ಡಿ.ಬಿ ಪಾಟೀಲ್ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ಶರಣು ಎಸ್.ಗೋಡಿ, ಕಾಂಗ್ರೆಸ್ ಮಹಿಳಾ ಮುಖಂಡರಾದ ಸಾವಿತ್ರಿ ಹೂಗಾರ್, ಕರವೇ ಜಿಲ್ಲಾ ಘಟಕದ ಮಾರುತಿ ಈಳಿಗೆರೆ, ಕುಮಾರ್ ರೇವಣ್ಣ, ಡಾ. ಜಯಕುಮಾರ್ ಬ್ಯಾಳಿ, ಸಿದ್ದು ಅಂದನಗೌಡ್, ಕಿರಣ್ ಬೆಳೆಯಲಿ, ಚಿಂಚಲಿ ಗ್ರಾ.ಪಂ ಸದಸ್ಯರಾದ ನಿಂಗರೆಡ್ಡಿ ತೇರಿನಮನೆ, ಅಜಯ್ ಕಂಬಳಿ ಆನಂದ್ ಹೊಸಮನಿ, ಕೃಷ್ಣ ಎಸ್.ಲಮಾಣಿ, ವಿನಾಯಕ್ ಬದಿ, ದಾವಲ್‌ಸಾಬ್ ತಹಸೀಲ್ದಾರ, ಇಸಾಕ್ ನದಾಫ್, ಸಲೀಂಗೌಸ್ ಶಿರಹಟ್ಟಿ, ತೌಸಿಪ್ ಡಾಲಾಯತ್, ನಾಗರಾಜ್ ಬಂಡಿವಡ್ಡರ್, ಶೇಖರಗೌಡ ಮಾಲಿಪಾಟೀಲ್, ಶಂಭು, ಪ್ರಕಾಶ್, ಭವಾನಿ ಸೇಮಿನ್, ಶರಣಯ್ಯ ರುದ್ರಸ್ವಾಮಿಮಠ, ಗುರುರಾಜ್ ಬಂಡಿಹಾಳ, ಮಂಜು ಮಾಲಿಪಾಟೀಲ್, ಮಾನ್ವಿ ಗೀತಾ, ಬಸವರಾಜ್ ಕೋಗಿಲೆ, ವಿದ್ಯಾಶ್ರೀ ಮಾಲಿಪಾಟೀಲ್, ಗೀತಾ ಹಟ್ಟಿ ಸೇರಿದಂತೆ ಕಾರ್ಯಕರ್ತರು, ಸಭಕ್ತ ವೃಂದದವರು ಭಾಗವಹಿಸಿದ್ದರು.

ಪಂ. ಪುಟ್ಟರಾಜರ 13ನೇ ಪುಣ್ಯ ಸ್ಮರಣೆಯ ಅಂಗವಾಗಿ ಶ್ರೀ ಕಾಶಿಪೀಠದ ಸಂಸ್ಕೃತ ಪಾಠಶಾಲೆಯ ಮಕ್ಕಳಿಗೆ ಲೇಖನ ಪರಿಕರಗಳನ್ನು ವಿತರಿಸಲಾಯಿತು. ಶ್ರೀ ಗುರು ಪಂ. ಪುಟ್ಟರಾಜ ಸಮಾಜದ ಟ್ರಸ್ಟಿನ ಅಧ್ಯಕ್ಷರು, ಸರ್ವ ಸದಸ್ಯರು, ಓಣಿಯ ಹಿರಿಯರಾದ ಪಟ್ಟದಕಲ್, ಬಸವರಾಜ್ ಚಿನ್ನಾಪುರ, ಬಸನಗೌಡ ಹಿರೇಗೌಡ, ಶಿವಪ್ಪ ಲಗಳಿ, ಕಮಿಟಿಯ ಅಧ್ಯಕ್ಷ ಎಸ್.ಜಿ ಕಟ್ಟಿಗೆಹಳ್ಳಿಮಠ, ಉಪಾಧ್ಯಕ್ಷ ಬಸನಗೌಡ ಪಾಟೀಲ್, ಕಾರ್ಯದರ್ಶಿ ಗಂಗಾಧರ ಬೆಣಕಲ್, ಖಜಾಂಚಿ ಮಾಂತೇಶ್ ಲಗಳಿ, ಸದಸ್ಯರಾದ ಈಶಪ್ಪ ಅಂಗಡಿ, ಬಸವರಾಜ ದಾವಣಗೆರೆ, ಶರಣಪ್ಪ ಮೇಟಿ, ಭೀಮಪ್ಪ ಮೊಕಾಶಿ ಮುಂತಾದವರಿದ್ದರು.



ನರೇಗಲ್ಲ ಸಮೀಪದ ಕೋಚಲಾಪುರ ಗ್ರಾಮಸ್ಥರು ಈಚೆಗೆ ಗದುಗಿನ ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ 13ನೇ ಪುಣ್ಯಸ್ಮರಣೋತ್ಸವ ಆಚರಿಸಿ, ಪುಟ್ಟರಾಜರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸುವ ಮೂಲಕ ಭಕ್ತಿಯನ್ನು ಸಮರ್ಪಿಸಿದರು. ಈ ಸಂದರ್ಭದಲ್ಲಿ ಪ್ರಶಾಂತ್ ಹಿರೇಮಠ, ಸಂಗಯ್ಯ ಮಾಲಗಿತ್ತಿಮಠ, ಅಯ್ಯನಗೌಡ್ರ, ಮಲ್ಲರಡ್ಡೇಪ್ಪ ರಡ್ಡೇರ, ಜಗದೀಶ ಹಿರೇಮಠ, ಮುತ್ತಪ್ಪ ಹನುಮನಾಳ, ಅಂದಾನಯ್ಯ ಕಣಗಿನಹಾಳ ಮುಂತಾದವರಿದ್ದರು.



### ಬಳಗಾನೂರ ಶ್ರೀ ಶಾಂಭವಿ ಸೇವಾ ಸಮಿತಿ ಉದ್ಘಾಟಿಸಿದ ಶಿವಶಾಂತವೀರ ಶರಣರು

# ಸಂಘಟನೆಯಿಂದ ಸಮಾಜ ಸುಧಾರಣೆ ಸಾಧ್ಯ



> ಶ್ರೀ ಶಾಂಭವಿ ಸೇವಾ ಸಮಿತಿ ಅಧ್ಯಕ್ಷ ಡಾ.ಹನುಮಂತಗೌಡ ಆರ್.ಕಲ್ಮನಿ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಹಿರಿಯರು ಹಾಕಿಕೊಟ್ಟ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದುವರೆಕೊಂಡು ಹೋಗುವ ನಿಟ್ಟಿನಲ್ಲಿ ನಾವೆಲ್ಲರೂ ಕೂಡಿ ಕಾರ್ಯನಿರ್ವಹಿಸಲು ಕಂಕಣಬದ್ಧರಾಗಿದ್ದೇವೆ. ಪುರಾತನ ಕಾಲದ ಶ್ರೀ ಶಾಂಭವಿ ದೇವಸ್ಥಾನದ ಜೀರ್ಣೋದ್ಧಾರ ಮಾಡುವ ಸಂಕಲ್ಪ ಹೊಂದಿದ್ದು, ಇದಕ್ಕೆ ಬಳಗಾನೂರು ಗ್ರಾಮಸ್ಥರ ಸಹಾಯ-ಸಹಕಾರ ಇರಲೆಂದು ಹೇಳಿದರು.

■ ವಿಜಯಸಾಕ್ಷಿ ಸುದ್ದಿ, ಗದಗ

ಇಂದಿನ ತಂತ್ರಜ್ಞಾನ ಯುಗದಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯಚಟುವಟಿಕೆಗಳು ಶ್ರೀಮಂತವಾಗಬೇಕಾದರೆ ಸಂಘಟನೆಯಿಂದ ಮಾತ್ರ ಸಾಧ್ಯವಿದೆ ಎಂದು ಸುಕ್ಷೇತ್ರ ಬಳಗಾನೂರಿನ ಪೂಜ್ಯ ಶ್ರೀ ಶಿವಶಾಂತವೀರ ಶರಣರು ಹೇಳಿದರು.

ಅವರು ಗದಗ ತಾಲೂಕಿನ ಬಳಗಾನೂರ ಗ್ರಾಮದಲ್ಲಿ ಶ್ರೀ ಶಾಂಭವಿ ಸೇವಾ ಸಮಿತಿ ಬಳಗಾನೂರ ಇದರ ಉದ್ಘಾಟನಾ ಸಮಾರಂಭವನ್ನು ಜ್ಯೋತಿ ಬೆಳಗಿಸುವ ನೆರವೇರಿಸಿ, ಆಶೀರ್ವಚನ ನೀಡಿದರು.

ಗ್ರಾಮೀಣ ಪರಿಸರದಲ್ಲಿ ಶ್ರೀ ಶಾಂಭವಿ ಸೇವಾ ಸಮಿತಿ ರಚನೆಯಾಗಿ, ಧಾರ್ಮಿಕ, ಸಮಾಜಿಕ ಕಾರ್ಯಚಟುವಟಿಕೆಗಳು ಆರಂಭಗೊಳ್ಳುತ್ತಿರುವುದು ಸಂತಸ ತಂದಿದೆ ಎಂದು ಹೇಳಿದರು.

ಬಳಗಾನೂರಿನ ಹಿರಿಯ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಜಿಯವರು ಕಾರ್ಯಕ್ರಮದ ಸಮ್ಮುಖ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ವೇ.ಮೂ ಶ್ರೀ ಚನ್ನಯ್ಯಜ್ಜ ಹು.ಶಾಂತಯ್ಯನಮಠ, ಸಮಿತಿಯ ಗೌರವಾಧ್ಯಕ್ಷ ಗಂಗನಗೌಡ ಬಸನಗೌಡ ಚನ್ನಪ್ಪಗೌಡ್ರ, ಉಪಾಧ್ಯಕ್ಷ ಸುರೇಶ ಭಿಮಪ್ಪ ಚಿಮ್ಮನಕಟ್ಟಿ, ಕಾರ್ಯದರ್ಶಿ ಶರಣಪ್ಪ ಭಿಂಗಿ, ಸಹ ಕಾರ್ಯದರ್ಶಿ ಶಂಕ್ರಪ್ಪ ಗೂಳಪ್ಪ ಹಡಪದ, ಖಜಾಂಚಿ ಶರಣಪ್ಪ ಮಲಕಾಜಪ್ಪ ಕರಡ್ಡಿ, ಸದಸ್ಯರಾದ ಗಫಾರಸಾಬ ಮಲಿಕಸಾಬ ನದಾಫ್, ಸಂಗಪ್ಪ ತೋಟಪ್ಪ ಚವಡಿ, ಉಮೇಶ ಮಹಾದೇವಪ್ಪ ಮಡಿವಾಳರ, ನಾಗಪ್ಪ ಬಸವಂತಪ್ಪ ಬಡಿಗೇರ, ಸಿದ್ಧಪ್ಪ ಬಸಪ್ಪ ವಗ್ಗನವರ, ವೆಂಕಟೇಶ ಚನ್ನಬಸಪ್ಪ ಹಡಪದ, ಬಸವರಾಜ ಚನ್ನವೀರಪ್ಪ ಚವಡಿ, ದಾನಪ್ಪ ಯಲ್ಲಪ್ಪ ಗಡ್ಡೆಪ್ಪನವರ, ವೆಂಕಪ್ಪ ಭೀಮಪ್ಪ ವಾರದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶಿಕ್ಷಕ ಎಸ್.ಎಸ್ ಚಟ್ರಿ ಪ್ರಾರ್ಥಿಸಿ, ಸ್ವಾಗತಿಸಿದರು. ಉಪನ್ಯಾಸಕ ಪ್ರೊ.ವಿಜಯಕುಮಾರ ಕರಮುಡಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

### ಗ್ರಾಮಾಭಿವೃದ್ಧಿ ಹೋರಾಟ ಸಮಿತಿ ವತಿಯಿಂದ ತಹಸೀಲ್ದಾರರಿಗೆ ಮನವಿ

# ಹದಗೆಟ್ಟ ರಸ್ತೆಗಳನ್ನು ಸರಿಪಡಿಸಿ



> ಬಾಲೆಹೊಸೂರಿನಿಂದ ಸೂರಣಗಿ, ಹಾಲಗಿ, ತಂಗೋಡ, ಇಚ್ಚಂಗಿ, ಮಾದಾಪುರ ಸಂಪರ್ಕಿಸುವ ಈ ಎಲ್ಲ ರಸ್ತೆಗಳು ಸಂಪೂರ್ಣ ಹಾಳಾಗಿ ವರ್ಷಗಳೇ ಕಳೆದಿವೆ. ಬಾಲೆಹೊಸೂರ ಮಾರ್ಗವಾಗಿ ಗುತ್ತಲ, ರಾಣೆಬೆನ್ನೂರ ಹಾಗೂ ಹಾವೇರಿ ತಾಲೂಕಿನ ಹಲವು ಹಳ್ಳಿಗಳಿಂದ ಲಕ್ಷೇಶ್ವರಕ್ಕೆ ನಿತ್ಯ ವ್ಯಾಪಾರ, ಶಿಕ್ಷಣ, ಉದ್ಯೋಗ, ಆಸ್ಪತ್ರೆ, ಅನೇಕ ಕೆಲಸ ಕಾರ್ಯಗಳಿಗೆ ಹೋಗುತ್ತಾರೆ. ಆದರೆ ರಸ್ತೆಯುದ್ದಕ್ಕೂ ಆಳವಾದ ತಗ್ಗು ಗುಂಡಿಗಳು ಬಿದ್ದು ಬೈಕ್, ಕಾರು, ಬಸ್ಸು, ಮತ್ತು ಚಕ್ಕಡಿಗಳು ಸಂಚರಿಸದಂತಾಗಿವೆ.

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಬಾಲೆಹೊಸೂರಿನಿಂದ ಸೂರಣಗಿ, ಹಾಲಗಿ, ತಂಗೋಡ, ಇಚ್ಚಂಗಿ ಮಾದಾಪುರ ಸಂಪರ್ಕಿಸುವ ರಸ್ತೆಗಳು ಸಂಪೂರ್ಣ ತಗ್ಗು-ಗುಂಡಿಗಳು ಬಿದ್ದು, ಯಾವುದೇ ವಾಹನಗಳು ಓಡಾಡಲೂ ಅಸಾಧ್ಯವೆಂಬಂತೆ ಹದಗೆಟ್ಟು ಹೋಗಿವೆ. ಈಗಾಗಲೇ ಗ್ರಾಮಸ್ಥರು ವಿವಿಧ ಸಂಘಟನೆಗಳ ಮುಖಂಡರು, ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜವಾಗಿಲ್ಲ. ಕೂಡಲೇ ಹದಗೆಟ್ಟ ರಸ್ತೆಗಳನ್ನು ಸರಿಪಡಿಸುವಂತೆ ಆಗ್ರಹಿಸಿ ಸೋಮವಾರ ಬಾಲೇಹೊಸೂರು ಗ್ರಾಮಾಭಿವೃದ್ಧಿ ಹೋರಾಟ ಸಮಿತಿಯವರು ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗ್ರಾಮಾಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಬಸವರಡ್ಡಿ ಹನುಮರಡ್ಡಿ ಮತ್ತು ತಾ.ಪಂ ಮಾಜಿ ಸದಸ್ಯ ನಿಂಗಪ್ಪ ಜಾಲವಾಡಗಿ ಮಾತನಾಡಿ, ಮುಖ್ಯ ರಸ್ತೆಗಳು ಸಂಪೂರ್ಣ ಹದಗೆಟ್ಟು ಹೋಗಿರುವ ಕಾರಣ ಸರಿಯಾಗಿ ಬಸ್‌ಗಳು ಬರುತ್ತಿಲ್ಲ. ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ನಿತ್ಯವೂ ತೊಂದರೆ ತಪ್ಪಿಲ್ಲ. ಮನವಿ ಸಲ್ಲಿಸಿದ 15 ದಿನಗಳೊಳಗಾಗಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನಮ್ಮ ಮನವಿಯನ್ನು ಪರಿಗಣಿಸಿ ರಸ್ತೆ ದುರಸ್ತಿ ಕಾಮಗಾರಿ ಕೈಗೊಳ್ಳದಿದ್ದರೆ ಬಾಲೇಹೊಸೂರ ಗ್ರಾಮಾಭಿವೃದ್ಧಿ ಹೋರಾಟ ಸಮಿತಿಯ ಪದಾಧಿಕಾರಿಗಳು ಹಾಗೂ ಗ್ರಾಮದ ಸರ್ವ ನಾಗರಿಕರು ಅಕ್ಟೋಬರ್ 10ರಂದು ಬೆಳಿಗ್ಗೆ 6 ಗಂಟೆಯಿಂದ ರಸ್ತೆ ದುರಸ್ತಿ ಕಾಮಗಾರಿ ಆರಂಭವಾಗುವವರೆಗೂ ಬಾಲೇಹೊಸೂರನಲ್ಲಿ ಸಂಪೂರ್ಣ ವಾಹನ ಸಂಚಾರ ಬಂದ್ ಮಾಡಿ, ರಸ್ತೆ ತಡೆ ಚಳುವಳಿಯನ್ನು ಹಮ್ಮಿಕೊಳ್ಳುತ್ತೇವೆಂದು ಎಚ್ಚರಿಕೆ ನೀಡಿದರು.

ತಹಸೀಲ್ದಾರ ಕಚೇರಿಯ ಶಿರಸ್ತೇದಾರ ರೇಣುಕಾ ಹರಿಜನ ಅವರು ಮನವಿ ಸ್ವೀಕರಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವದಾಗಿ ಹೇಳಿದರು. ಈ ವೇಳೆ ಗ್ರಾಮದ ಶ್ಯಾಮಣ್ಣ ಕಡೇಮನಿ, ಮಹಾಂತೇಶ ಈರಗಾರ ಫಕ್ಕೀರಯ್ಯ ಹಿರೇಮಠ, ಹನುಮಂತಪ್ಪ ಸವಣೂರು, ಭರತರಾಜ ಗುಡಗೇರಿ, ಬಸವರಾಜ ಅರಳಿ, ಜಗದೀಶ ಜೋಗೇರ, ಸದ್ದಾಂ ಹಾಲಗಿ, ಕರಿಯಪ್ಪ ಸಾಂದ್ಲಿ, ರಾಜು ಬೆಂಚಳ್ಳಿ ಹಾಗೂ ಗ್ರಾಮದ ಹಿರಿಯರು, ಮುಖಂಡರು ಹಾಜರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka